ಕರ್ನಾಟಕ ಸರ್ಕಾರ

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ**

**1979ರ ಕರ್ನಾಟಕ ಅಧಿನಿಯಮ, ಸಂಖ್ಯೆ 22**

# ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979

# ಮತ್ತು

# ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು, 1979

**(31ನೇ ಮಾರ್ಚ್ 1986ರ ವರೆಗೆ ತಿದ್ದುಪಡಿ ಮಾಡಲಾಗಿದೆ)**

# ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979

# ಮತ್ತು

# ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು, 1979

**ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವಾಲಯ**

**ಅಧಿಸೂಚನೆ**

**ಕ್ರಮಾಂಕ: ಲಾ 31 ಎಲ್‌ಎಂಪಿ 89, ಬೆಂಗಳೂರು, ದಿನಾಂಕ 26ನೇ ಜೂನ್ 1989**

ಕರ್ನಾಟಕ ರಾಜಭಾಷಾ ಅಧಿನಿಯಮ, 1963 (1963ರ ಕರ್ನಾಟಕ ಅಧಿನಿಯಮ, 26)ರ 5ಎ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ರಾಜ್ಯಪಾಲನಾದ ಶ್ರೀ ಪಿ. ವೆಂಕಟಸುಬ್ಬಯ್ಯ ಎಂಬ ನಾನು ಕರ್ನಾಟಕ ಭೋಗವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ 1979ರ ಕರ್ನಾಟಕ ಅಧಿನಿಯಮ, 1979ರ ಸಂಖ್ಯೆ 22) ಕನ್ನಡ ಭಾಷೆಯಲ್ಲಿರುವ ಈ ಮುಂದಿನ ಭಾಷಾಂತರವು ಸರ್ಕಾರಿ ರಾಜ್ಯಪತ್ರದಲ್ಲಿ ಈ ಅಧಿಸೂಚನೆಯು ಪ್ರಕಟವಾದ ದಿನಾಂಕದಿಂದ ಪರಿಣಾಮ ಕಾರಿಯಾಗುವಂತೆ ಕನ್ನಡ ಭಾಷೆಯಲ್ಲಿ ಅದರ ಪಾಠವಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸುತ್ತೇನೆ.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು,

ಭಾರತ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ
(ಪ್ರಕಟಣೆಗಳು)

# ವಿಷಯಾನುಕ್ರಮಣಿಕೆ


| ಕ್ರಮ ಸಂಖ್ಯೆ | ವಿಷಯ | ಪುಟಗಳು |
|---|---|---|
| 1 | ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979 | 1 |
| 2 | ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು, 1979 | 20 |
| 3 | ಅಧಿಸೂಚನೆಗಳು ಮತ್ತು ತಪ್ತೋಲೆ | 42 |

## ಕರ್ನಾಟಕ ಅಧಿನಿಯಮ, 1979ರ ಸಂಖ್ಯೆ 22

(1979ರ ಮಾರ್ಚ್ ಮೂವತ್ತೊಂದನೇ ದಿವಸದಂದು ಕರ್ನಾಟಕ ವಿಶೇಷ ರಾಜಪತ್ರದಲ್ಲಿ ಮೊದಲು ಪ್ರಕಟವಾಗಿದೆ)

# ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979

(1979ರ ಮಾರ್ಚ್ ಮೂವತ್ತೊಂದನೇ ದಿವಸದಂದು ರಾಜ್ಯಪಾಲರ ಅನುಮತಿ ಪಡೆದಿದೆ)

ಕರ್ನಾಟಕ ಅಧಿನಿಯಮ, 1981ರ 9, 1982ರ 18 ಮತ್ತು 1985ರ 21 ಮತ್ತು 1986ರ 10 (ಇವುಗಳ ಮೂಲಕ ತಿದ್ದುಪಡಿಯಾದಂತೆ)

ಹೋಟೆಲುಗಳಲ್ಲಿ ಮತ್ತು ವಸತಿ ಗೃಹಗಳಲ್ಲಿ ಒದಗಿಸಿದ ಭೋಗ ವಸ್ತುಗಳ ಮೇಲೆ ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆಗಾಗಿ ಉಪಬಂಧಿಸುವ ಅಧಿನಿಯಮ,

ಹೋಟೆಲುಗಳಲ್ಲಿ ಮತ್ತು ವಸತಿ ಗೃಹಗಳಲ್ಲಿ ಒದಗಿಸಿದ ಭೋಗ ವಸ್ತುಗಳ ಮೇಲೆ ತೆರಿಗೆ ವಿಧಿಸುವಿಕೆ ಮತ್ತು ಸಂಗ್ರಹಣೆಗಾಗಿ ಮತ್ತು ಅದಕ್ಕೆ ಸಂಬಂಧಪಟ್ಟ ವಿಷಯಗಳಿಗಾಗಿ ಉಪಬಂಧಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಮೂವತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:–** (1) ಈ ಅಧಿನಿಯಮವನ್ನು ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

[1](3) ಇದು ರಾಜ್ಯ ಸರ್ಕಾರವು, ಸರ್ಕಾರಿ ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತು ಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದು.

**2. ಪರಿಭಾಷೆಗಳು:–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(1) **"ವಸತಿಗಾಗಿ ಚಾರ್ಜುಗಳು"** ಎಂಬುದು ಹವಾ ನಿಯಂತ್ರಣ, ದೂರವಾಣಿ, ದೂರದರ್ಶನ, ರೇಡಿಯೋ, ಸಂಗೀತ, ಹೆಚ್ಚಿನ ಹಾಸಿಗೆಗಳು ಮತ್ತು ಅಂಥಹದಕ್ಕಾಗಿನ ಚಾರ್ಜುಗಳನ್ನು ಒಳಗೊಳ್ಳುತ್ತದೆ:

ಪರಂತು, ಆಹಾರ ಪಾನೀಯ ಅಥವಾ ಇತರ ಸೌಕರ್ಯಗಳಿಗಾಗಿನ ಯಾವುವೇ ಚಾರ್ಜುಗಳನ್ನು ಇದು ಒಳಗೊಳ್ಳುವುದಿಲ್ಲ.

(1ಕ) **"ಕಮೀಷನರ್"** ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ 3ನೇ ಪ್ರಕರಣದ ಮೇರೆಗೆ ನೇಮಕಗೊಂಡ ವಾಣಿಜ್ಯ ತೆರಿಗೆಗಳ ಕಮೀಷನರ್.

**ವಿವರಣೆ.–** ವಸತಿಗಾಗಿ ಯಾವುವೇ ಚಾರ್ಜುಗಳನ್ನು ವಿಧಿಸಲಾಗಿದೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ ಅಂಥ ಪ್ರಶ್ನೆಯನ್ನು ರಾಜ್ಯ ಸರ್ಕಾರಕ್ಕೆ ಒಪ್ಪಿಸತಕ್ಕದ್ದು ಮತ್ತು ರಾಜ್ಯ ಸರ್ಕಾರದ ತೀರ್ಮಾನವು ಅಂತಿಮವಾಗಿರತಕ್ಕದ್ದು ಮತ್ತು ಅದನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸತಕ್ಕದ್ದಲ್ಲ.

---

1. ಈ ಅಧಿನಿಯಮವು 1–6–1979ರಂದು ಜಾರಿಗೆ ಬಂದಿದೆ (31–5–1979ನೇ ದಿನಾಂಕದ ಅಧಿಸೂಚನೆ ಸಂಖ್ಯೆ: ಎಫ್‌ಡಿ 54 ಸಿಎಸ್‌ಎಲ್ 79ನ್ನು ನೋಡಿ. ಎಸ್.ಓ. 1271)

(2) ಹೋಟೆಲಿನಲ್ಲಿ ಒದಗಿಸಿದ ಭೋಗ ವಸ್ತುವಿಗೆ ಸಂಬಂಧಿಸಿದಂತೆ "ರಿಯಾಯಿತಿ ದರ" ಎಂದರೆ ಆ ಹೋಟೆಲು ಅಂಥ ಭೋಗ ದರಕ್ಕಿಂತ ಕಡಿಮೆಯದಾದ ವಸ್ತುವಿಗಾಗಿ ನಿಗದಿಪಡಿಸಿದ ಸಾಮಾನ್ಯ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಸರ್ಕಾರ ಅಥವಾ ಇತರ ಯಾವುದೇ ಪ್ರಾಧಿಕಾರವು ನಿಗದಿಪಡಿಸಿದ ದರಕ್ಕಿಂತ ಕಡಿಮೆ ದರ;

(4) "ಹೋಟೆಲ್" ಎಂದರೆ, ಹಣಕಾಸಿನ ಪ್ರತಿಫಲಕ್ಕಾಗಿ ವ್ಯವಹಾರದ ರೂಪದಲ್ಲಿ ಊಟದ ಸಹಿತ ಅಥವಾ ಊಟವಿಲ್ಲದೆ ವಸತಿ ಅನುಕೂಲವನ್ನು ಒದಗಿಸಲಾದ ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಅದು ವಸತಿ ಗೃಹವನ್ನು ಒಳಗೊಳ್ಳುತ್ತದೆ.

(4ಕ) "ಜಂಟಿ ಕಮೀಷನರ್" ಎಂದರೆ, ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ 3ನೇ ಪ್ರಕರಣದ ಮೇರೆಗೆ ನೇಮಕಗೊಂಡ ವಾಣಿಜ್ಯ ತೆರಿಗೆಗಳ ಜಂಟಿ ಕಮೀಷನರ್.

(5) "ಹೋಟೆಲಿನಲ್ಲಿ ಒದಗಿಸಿದ ಭೋಗವಸ್ತು" ಎಂದರೆ, ಹೋಟೆಲಿನಲ್ಲಿ ಒದಗಿಸಿದ ವಸತಿ ಅನುಕೂಲ, ಯಾವುದಕ್ಕಾಗಿನ ಚಾರ್ಜುಗಳ ದರವು (ಹವಾ ನಿಯಂತ್ರಣ, ದೂರವಾಣಿ, ದೂರದರ್ಶನ, ರೇಡಿಯೋ, ಸಂಗೀತ, ಹೆಚ್ಚಿನ ಹಾಸಿಗೆಗಳು ಯಾವ ಸೌಕರ್ಯಗಳಿಗಾಗಿ ಚಾರ್ಜುಗಳನ್ನು ಕಡ್ಡಾಯವಾಗಿ ಸಂದಾಯ ಮಾಡಬೇಕಾಗಿದೆಯೋ ಆ ಇತರ ಸೌಕರ್ಯಗಳು ಆದರೆ ಆಹಾರ, ಪಾನೀಯಗಳಿಗಾಗಿನ ಚಾರ್ಜುಗಳನ್ನು ಹೊರತುಪಡಿಸಿ) ಪ್ರತಿ ದಿವಸ ಪ್ರತಿ ಕೊಠಡಿಗೆ ಐವತ್ತು ರೂಪಾಯಿಗಳಿಗಿಂತ ಕಡಿಮೆಯಿಲ್ಲದ ಆ ದರ.

"(5ಕ) "ಭೋಗ ವಸ್ತು ತೆರಿಗೆ ಅಧಿಕಾರಿ" ಎಂದರೆ, ಈ ಅಧಿನಿಯಮದ ಮೇರೆಗೆ ಭೋಗವಸ್ತು ತೆರಿಗೆ ಅಧಿಕಾರಿಯ ಪ್ರಕಾರ್ಯಗಳನ್ನು ಚಲಾಯಿಸಲು ಮತ್ತು ನೆರವೇರಿಸಲು ರಾಜ್ಯ ಸರ್ಕಾರದಿಂದ ನೇಮಕಗೊಂಡ ವ್ಯಕ್ತಿ".

(6) ಹೋಟೆಲಿಗೆ ಸಂಬಂಧಿಸಿದಂತೆ "ಮಾಲೀಕ" ಎಂಬುದು ತತ್ಕಾಲದಲ್ಲಿ ಹೋಟೆಲಿನ ವ್ಯವಸ್ಥಾಪನೆಯ ಪ್ರಭಾರವನ್ನು ಹೊಂದಿರುವ ವ್ಯಕ್ತಿಯನ್ನು ಒಳಗೊಳ್ಳುತ್ತದೆ.

(7) "ತೆರಿಗೆ" ಎಂದರೆ, ಈ ಅಧಿನಿಯಮದ ಮೇರೆಗೆ ವಿಧಿಸಿದ ಮತ್ತು ಸಂಗ್ರಹಿಸಿದ ಭೋಗ ವಸ್ತು ತೆರಿಗೆ.

**3. ಭೋಗ ವಸ್ತು ತೆರಿಗೆಯ ವಿಧಿಸುವಿಕೆ ಮತ್ತು ಸಂಗ್ರಹಣೆ:**–(1) ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಹೋಟೆಲಿನಲ್ಲಿ ಪ್ರತಿಯೊಂದು ಕೊಠಡಿಗೆ ಸಂಬಂಧಿಸಿದಂತೆ ಒದಗಿಸಿದ ಭೋಗವಸ್ತುವಿನ ಮೇಲೆ ಈ ಕೆಳಕಂಡ ದರಗಳಲ್ಲಿ (ಭೋಗ ವಸ್ತು ತೆರಿಗೆ ಎಂದು ಕರೆಯಲಾಗುವ) ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು, ಎಂದರೆ,–

| | | |
|---|---|---|
| ಕ) | ಪ್ರತಿ ಕೊಠಡಿಗೆ ಪ್ರತಿ ದಿವಸಕ್ಕೆ ವಸತಿಗಾಗಿ ಚಾರ್ಜುಗಳು ಐವತ್ತು ರೂಪಾಯಿಗಳಿಗಿಂತ ಕಡಿಮೆ ಇಲ್ಲದಿದ್ದು ಆದರೆ ನೂರ ಐವತ್ತು ರೂಪಾಯಿಗಳಿಗಿಂತ ಕಡಿಮೆಯಾಗಿರುವಲ್ಲಿ, | ಅಂಥ ಚಾರ್ಜುಗಳ ಶೇಕಡಾ ಹತ್ತರಷ್ಟು |
| ಖ) | ಪ್ರತಿ ಕೊಠಡಿಗೆ ಪ್ರತಿ ದಿವಸಕ್ಕೆ ವಸತಿಗಾಗಿ ಚಾರ್ಜುಗಳು ನೂರ ಐವತ್ತು ರೂಪಾಯಿಗಳಿಗಿಂತ ಕಡಿಮೆ ಇಲ್ಲದಿದ್ದು ಆದರೆ ಇನ್ನೂರ ಐವತ್ತು ರೂಪಾಯಿಗಳಿಗಿಂತ ಕಡಿಮೆ ಯಾಗಿರುವಲ್ಲಿ, | ಅಂಥ ಚಾರ್ಜುಗಳ ಶೇಕಡಾ ಹದಿನೈದರಷ್ಟು |
| ಗ) | ಪ್ರತಿ ಕೊಠಡಿಗೆ ಪ್ರತಿ ದಿವಸಕ್ಕೆ ವಸತಿಗಾಗಿ ಚಾರ್ಜುಗಳು ಇನ್ನೂರ ಐವತ್ತು ರೂಪಾಯಿಗಳಿಗಿಂತ ಕಡಿಮೆ ಯಾಗಿಲ್ಲದಿರುವಲ್ಲಿ, | ಅಂಥ ಚಾರ್ಜುಗಳ ಶೇಕಡಾ ಇಪ್ಪತ್ತರಷ್ಟು |

ಪರಂತು, ವಸತಿ ಚಾರ್ಜುಗಳನ್ನು ದಿವಸದ ಆಧಾರದ ಮೇಲೆ ಅಲ್ಲದೆ ಸಂದಾಯ ಮಾಡಬೇಕಾಗಿರುವಲ್ಲಿ ಆಗ, ಈ ಪ್ರಕರಣದ ಮೇರೆಗೆ ತೆರಿಗೆಯ ಹೊಣೆಗಾರಿಕೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ, ಆ ಚಾರ್ಜುಗಳನ್ನು ಯಾವ ವಸತಿಯ ಅವಧಿಗಾಗಿ ಆ ಚಾರ್ಜುಗಳು ಸಂದಾಯವಾಗಬೇಕಾಗಿದೆಯೋ ಆ ವಸತಿಯ ಅವಧಿಯ ಮೇಲೆ ಆಧರಿಸಿದ ದಿವಸಕ್ಕೆಂದು ಲೆಕ್ಕ ಹಾಕತಕ್ಕದ್ದು.

ಮತ್ತು ಪರಂತು, ಭಾರತದಲ್ಲಿ ವಿದೇಶಿ ರಾಜತಾಂತ್ರಿಕ ನಿಯೋಗದ ಸದಸ್ಯನಾಗಿರುವ ಯಾವನೇ ವ್ಯಕ್ತಿಯು ವಸತಿಗಾಗಿ ಯಾವುವೇ ಚಾರ್ಜುಗಳನ್ನು ಸಂದಾಯ ಮಾಡಿದಲ್ಲಿ, ಆಗ ಅಂಥ ವ್ಯಕ್ತಿಯು ತೆರಿಗೆಯ ಸಂದಾಯದಿಂದ ವಿನಾಯಿತಿಯನ್ನು ಹೊಂದಿರತಕ್ಕದ್ದು.

(2) * * * * *

(3) ಈ ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆಯ ಮೊಬಲಗನ್ನು ಲೆಕ್ಕ ಹಾಕುವಲ್ಲಿ, ಆ ಮೊಬಲಗು ಐದು ಪೈಸೆಯ ಗುಣಕವಾಗಿರದಿದ್ದರೆ, ಅದನ್ನು ಐದು ಪೈಸೆಯ ಮುಂದಿನ ಹೆಚ್ಚಿನ ಗುಣಕಕ್ಕೆ ಹೆಚ್ಚಿಸತಕ್ಕದ್ದು.

**4. ತೆರಿಗೆ ಸಂಗ್ರಹಣಾ ವಿಧಾನ:–** (1) ಹೋಟೆಲಿನಲ್ಲಿ ಒದಗಿಸಿದ ಭೋಗವಸ್ತುವಿಗಾಗಿನ ಚಾರ್ಜುಗಳ ದರವು, ಆಹಾರ ಅಥವಾ ಪಾನೀಯ ಅಥವಾ ಇತರ ಸೌಕರ್ಯಗಳು ಯಾವುದಾದರೂ ಇದ್ದರೆ ಅವುಗಳನ್ನು (2ನೇ ಪ್ರಕರಣದ (5)ನೇ ಖಂಡದಲ್ಲಿ ಉಲ್ಲೇಖಿಸಲಾದ ಸೌಕರ್ಯಗಳು ಆಗಿರುವುವು) ಅವುಗಳನ್ನು ಒಳಗೊಂಡಿರುವಲ್ಲಿ ಆಗ ಭೋಗವಸ್ತು ತೆರಿಗೆ ಅಧಿಕಾರಿ ಕಾಲಕಾಲಕ್ಕೆ ಮಾಲೀಕನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ, ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಲೆಕ್ಕ ಹಾಕುವ ಉದ್ದೇಶಕ್ಕಾಗಿ ಅಂಥ ಭೋಗವಸ್ತುಗಳಿಗಾಗಿ ಮತ್ತು 2ನೇ ಪ್ರಕರಣದ (5)ನೇ ಖಂಡದಲ್ಲಿ ಉಲ್ಲೇಖಿಸಿದ ಸೌಕರ್ಯಗಳಾಗಿರುವ ಆಹಾರ ಅಥವಾ ಪಾನೀಯ ಅಥವಾ ಇತರ ಸೌಕರ್ಯಗಳು ಯಾವುದಾದರೂ ಇದ್ದರೆ ಅವುಗಳಿಗಾಗಿ ಚಾರ್ಜುಗಳ ಪ್ರತ್ಯೇಕ ದರಗಳನ್ನು ನಿಗದಿಪಡಿಸಬಹುದು.

(2) ಹೋಟೆಲಿನಲ್ಲಿ ಒದಗಿಸಿದ ಭೋಗವಸ್ತುವಿಗಾಗಿನ ಚಾರ್ಜುಗಳ ಜೊತೆಗೆ ಸೇವಾ ಚಾರ್ಜುಗಳನ್ನು ವಿಧಿಸಲಾಗಿದ್ದು, ಮತ್ತು ಅದನ್ನು ಮಾಲೀಕನು ವಿನಿಯೋಜಿಸಿಕೊಂಡಿರುವಲ್ಲಿ ಮತ್ತು ಸಿಬ್ಬಂದಿಗೆ ಸಂದಾಯ ಮಾಡದಿರುವಲ್ಲಿ ಆಗ ಅಂಥ ಚಾರ್ಜುಗಳನ್ನು ಹೋಟೆಲಿನಲ್ಲಿ ಒದಗಿಸಿದ ಭೋಗವಸ್ತುಗಳಿಗಾಗಿನ ಚಾರ್ಜುಗಳ ಭಾಗವಾಗಿರುವುದಾಗಿ ಭಾವಿಸತಕ್ಕದ್ದು.

(3) (ಹೋಟೆಲಿನ ನಿಯೋಜಿತನಾಗಿರದ) ಹೋಟೆಲಿನಲ್ಲಿ ಯಾವನೇ ವ್ಯಕ್ತಿಗೆ ಒದಗಿಸಿದ ಭೋಗವಸ್ತುವಿಗೆ ಚಾರ್ಜು ಮಾಡದಿರುವಲ್ಲಿ ಅಥವಾ ರಿಯಾಯಿತಿ ದರದಲ್ಲಿ ಚಾರ್ಜು ಮಾಡಿರುವಲ್ಲಿ ಆಗ ಅಂಥ ಭೋಗವಸ್ತುವಿನ ಮೇಲಿನ ತೆರಿಗೆಯನ್ನು ಅಂಥ ಭೋಗ ವಸ್ತುವಿಗಾಗಿ ಪೂರ್ಣ ಚಾರ್ಜುಗಳನ್ನು ಮಾಡಿದ್ದಿದ್ದರೆ ಹೇಗೋ ಹಾಗೆ ವಿಧಿಸತಕ್ಕುದು ಮತ್ತು ಸಂಗ್ರಹಿಸತಕ್ಕದ್ದು.

(4) ನಿರ್ದಿಷ್ಟ ಸಂಖ್ಯೆಯ ವ್ಯಕ್ತಿಗಳಿಗೆ ಒದಗಿಸಿದ ಭೋಗ ವಸ್ತುಗಳನ್ನು ನಿರ್ದಿಷ್ಟಪಡಿಸಿದ ಸಂಖ್ಯೆಗಳಿಗಿಂತ ಹೆಚ್ಚಿನವರು ಭಾಗ ಮಾಡಿಕೊಂಡರೆ ಅಂಥ ನಿರ್ದಿಷ್ಟಪಡಿಸಿದ ಸಂಖ್ಯೆಯ ವ್ಯಕ್ತಿಗಳಿಗೆ ಒದಗಿಸಿದ ಭೋಗ ವಸ್ತುಗಳಿಗಾಗಿ ಸಂದಾಯ ಮಾಡಿದ ತೆರಿಗೆಯ ಜೊತೆಗೆ ವಸತಿ ಅನುಕೂಲ ಮಾಡಿಕೊಟ್ಟ ಹೆಚ್ಚಿನ ಭೋಗ ಸಂಖ್ಯೆಯ ವ್ಯಕ್ತಿಗಳಿಗಾಗಿ ವಿಧಿಸಿದ ಚಾರ್ಜುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾಗಿ ಸಹ ತೆರಿಗೆಯನ್ನು ವಿಧಿಸತಕ್ಕದ್ದು ಮತ್ತು ಸಂಗ್ರಹಿಸತಕ್ಕದ್ದು,

**4ಕ. ಮಾಲೀಕರ ನೋಂದಣಿ.–** (1) ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಪ್ರತಿಯೊಬ್ಬ ಮಾಲೀಕನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಅವಧಿಯೊಳಗೆ ಈ ಅಧಿನಿಯಮದ ಮೇರೆಗೆ ಅವನನ್ನು ನೋಂದಾಯಿಸಿಕೊಳ್ಳತಕ್ಕದ್ದು ಮತ್ತು ಅವನು ಇನ್ನೂರ ಐವತ್ತು ರೂಪಾಯಿಗಳ ನೋಂದಣಿ ಫೀಜನ್ನು ಸಂದಾಯ ಮಾಡತಕ್ಕದ್ದು.

(2) ಮಂಜೂರ್ಮಾಡಿದ ನೋಂದಣಿಯು ಒಂದು ವರ್ಷದವರೆಗೆ ಸಿಂಧುವಾಗಿರತಕ್ಕದ್ದು ಮತ್ತು (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಫೀಜನ್ನು ಸಂದಾಯ ಮಾಡಿದ ಮೇಲೆ ಅದನ್ನು ವರ್ಷದಿಂದ ವರ್ಷಕ್ಕೆ ನವೀಕರಿಸತಕ್ಕದ್ದು.

(3) ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957ರ ಮೇರೆಗೆ ಮಾಲೀಕನು ಈಗಾಗಲೇ ನೋಂದಾಯಿಸಿಕೊಂಡಿದ್ದಾಗ್ಯೂ, ಆಗ ಈ ಪ್ರಕರಣಗಳ ಮೇರೆಗೆ ನಿಯಮಿಸಿದ ನೋಂದಣಿ ಮತ್ತು ನವೀಕರಣ ಫೀಜನ್ನು ಸಂದಾಯ ಮಾಡಲು ಅವನು ಹೊಣೆಗಾರನಾಗಿರತಕ್ಕದ್ದಲ್ಲ.

(4) ಭೋಗವಸ್ತು ತೆರಿಗೆ ಅಧಿಕಾರಿಯು ಉಚಿತ ಮತ್ತು ಸಾಕಷ್ಟು ಕಾರಣಗಳಿಗಾಗಿ ಈ ನಿಯಮದ ಮೇರೆಗಿನ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನಿಂದ ತೆರಿಗೆಯ ಯುಕ್ತ ಸಂದಾಯಕ್ಕಾಗಿ ಭದ್ರತೆಯನ್ನು ತಗಾದೆ ಮಾಡಬಹುದು ಮತ್ತು ಅಂಥ ತಗಾದೆಯ ಮೇಲೆ ಮಾಲೀಕನು, ಹಾಗೆ ಭದ್ರತೆಯನ್ನು ತಗಾದೆ ಮಾಡುವ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಎಂಟು ದಿವಸಗಳೊಳಗೆ ಭದ್ರತೆಯನ್ನು ಒದಗಿಸತಕ್ಕದ್ದು.

(5) (4)ನೇ ಉಪ–ಪ್ರಕರಣದ ಮೇರೆಗೆ ಸಂದಾಯ ಮಾಡಬೇಕಾದ ಭದ್ರತೆಯ ಮೊಬಲಗು ಮಾಲೀಕನಿಂದ ಒಂದು ವರ್ಷಕ್ಕೆ ನಿರೀಕ್ಷಿಸಲಾದ ತೆರಿಗೆಯ ನಾಲ್ಕನೇ ಒಂದು ಭಾಗಕ್ಕೆ ಸಮನಾದ ಮೊಬಲಗನ್ನು ಮೀರತಕ್ಕದ್ದಲ್ಲ. ಈಗಾಗಲೇ ಒದಗಿಸಿರುವ ಭದ್ರತೆಯು ಸಾಕಷ್ಟಿಲ್ಲವೆಂದು ಭೋಗವಸ್ತು ತೆರಿಗೆ ಅಧಿಕಾರಿ ನಂಬಲು ಕಾರಣಗಳಿದ್ದರೆ ಅವನು ಹೆಚ್ಚಿನ ಭದ್ರತೆಯನ್ನು ತಗಾದೆ ಮಾಡಬಹುದು.

(6) ಒದಗಿಸಿದ ಭದ್ರತೆಯನ್ನು, ಅದರ ಮುಂದುವರಿಕೆಗಾಗಿ ಯಾವುದೇ ಕಾರಣಗಳು ಇಲ್ಲವೆಂದು, ಭೋಗ ವಸ್ತು ತೆರಿಗೆ ಅಧಿಕಾರಿಗೆ ಮನದಟ್ಟಾದ ಹೊರತು ಅಥವಾ ಆ ನೋಂದಣಿ ಪ್ರಮಾಣ ಪತ್ರವನ್ನು ರದ್ದುಪಡಿಸುವವರೆಗೆ ಪೂರ್ಣವಾಗಿ ಇಟ್ಟುಕೊಂಡು ಬರತಕ್ಕದ್ದು.

**5. ವಿವರ ಪಟ್ಟಿಕೆಗಳು:–** (1) ಈ ಅಧಿನಿಯಮದ ಮೇರೆಗೆ ತೆರಿಗೆ ಸಂದಾಯ ಮಾಡಲು ಹೊಣೆಗಾರನಾದ ಪ್ರತಿಯೊಬ್ಬ ಮಾಲೀಕನು ಆ ವಿವರಪಟ್ಟಿಕೆಯು ಸಂಬಂಧ ಪಡುವಂಥ ತಿಂಗಳು ಮುಕ್ತಾಯವಾದ ತರುವಾಯ ಎಂಟು ದಿವಸಗಳೊಳಗಾಗಿ ನಿಯಮಿಸಿದ ನಮೂನೆಯಲ್ಲಿ ಭೋಗ ವಸ್ತು ತೆರಿಗೆ ಅಧಿಕಾರಿಗೆ ಮಾಸಿಕ ವಿವರಪಟ್ಟಿಕೆಯನ್ನು ಒದಗಿಸತಕ್ಕದ್ದು.

(2) ಅಂಥ ಪ್ರತಿಯೊಂದು ವಿವರಪಟ್ಟಿಕೆಯು ಹೋಟೆಲಿನಲ್ಲಿ ವಾಸ ಮಾಡುವುದಕ್ಕಾಗಿ ಉದ್ದೇಶಿಸಿದಂಥ ಕೊಠಡಿಗಳ ಸಂಖ್ಯೆ ಅಥವಾ ಇತರ ಸ್ಥಳಾವಕಾಶವನ್ನು ಅಂಥ ಕೊಠಡಿಗಳು ಅಥವಾ ಸ್ಥಳಾವಕಾಶದಲ್ಲಿ ವಾಸಿಸುವ ವ್ಯಕ್ತಿಗಳ ಸಂಖ್ಯೆ, ಅವರು ಉಳಿದುಕೊಂಡ ಅವಧಿಗಳು ಅವರು ಆಗಮಿಸಿದ ಮತ್ತು ನಿರ್ಗಮಿಸಿದ ದಿನಾಂಕಗಳು, ಅವರಿಂದ ವಸೂಲು ಮಾಡಲಾದ ಚಾರ್ಜುಗಳ ಮೊಬಲಗು ಮತ್ತು ನಿಯಮಿಸಬಹುದಾದಂಥ ಇತರ ಮಾಹಿತಿಯನ್ನು ತೋರಿಸತಕ್ಕದ್ದು.

(3) (1)ನೇ ಉಪ–ಪ್ರಕರಣದಲ್ಲಿ ಅಗತ್ಯಪಡಿಸಿರುವಂತೆ ವಿವರ ಪಟ್ಟಿಕೆಯನ್ನು ಒದಗಿಸುವ ಮಾಲೀಕನು ನಿಯಮಿಸಿದ ರೀತಿಯಲ್ಲಿ, ಸರ್ಕಾರಿ ಖಜಾನೆಗೆ ವಿವರಪಟ್ಟಿಕೆಗೆ ಅನುಸಾರ ಅವನಿಂದ ಬರಬೇಕಾದ ತೆರಿಗೆಯ ಪೂರ್ಣ ಮೊಬಲಗನ್ನು ಮೊದಲು ಸಂದಾಯ ಮಾಡತಕ್ಕದ್ದು ಮತ್ತು ಅಂಥ ಸಂದಾಯದ ರಸೀದಿಯನ್ನು ವಿವರ ಪಟ್ಟಿಕೆಯ ಜೊತೆಗೆ ಲಗತ್ತಿಸತಕ್ಕದ್ದು.

(4) ನಿಯಮಿಸಿದ ರೀತಿಯಲ್ಲಿ ಪ್ರತಿಯೊಂದು ವಿವರಪಟ್ಟಿಕೆಯನ್ನು ಸತ್ಯಾಪನೆ ಮಾಡತಕ್ಕದ್ದು.

**6. ತೆರಿಗೆ ನಿರ್ಧಾರಣೆ ಮತ್ತು ಸಂಗ್ರಹಣೆ:–** (1) 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಒದಗಿಸಿದ ವಿವರಪಟ್ಟಿಕೆಯು ಪೂರ್ಣವಾದುದೆಂದು ಭೋಗವಸ್ತು ತೆರಿಗೆ ಅಧಿಕಾರಿಗೆ ಮನದಟ್ಟಾದರೆ ಮತ್ತು ಅದು ಸರಿಯಾಗಿಲ್ಲವೆಂದು ನಂಬಲು ಅವನಿಗೆ ಯಾವುದೇ ಕಾರಣವಿರದಿದ್ದರೆ ಅಂಥ ವಿವರಪಟ್ಟಿಕೆಯ ಆಧಾರದ ಮೇಲೆ ಮಾಲೀಕನಿಂದ ಬರಬೇಕಾದ ತೆರಿಗೆಯ ಮೊಬಲಗನ್ನು ಅವನು ನಿರ್ಧರಿಸತಕ್ಕದ್ದು.

(2) (ಕ) (5)ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಒದಗಿಸಿದ ವಿವರ ಪಟ್ಟಿಕೆಯು ಪೂರ್ಣವಾಗಿದೆಯೆಂದು ಭೋಗ ವಸ್ತು ತೆರಿಗೆ ಅಧಿಕಾರಿಗೆ ಮನದಟ್ಟಾಗದಿದ್ದರೆ ಅಥವಾ ಅದು ಸರಿಯಾಗಿಲ್ಲವೆಂದು ನಂಬಲು ಅವನಿಗೆ ಕಾರಣವಿದ್ದರೆ ಮತ್ತು ಅವನು ಮಾಲೀಕನ ಹಾಜರಾತಿಯು ಅಥವಾ ಮತ್ತಷ್ಟು ಸಾಕ್ಷ್ಯವನ್ನು ಹಾಜರ್ಪಡಿಸುವುದನ್ನು ಅಗತ್ಯಪಡಿಸುವುದು ಅವಶ್ಯವೆಂದು ಅವನು ಪರ್ಯಾಲೋಚಿಸಿದರೆ ಅವನು ನಿಯಮಿಸಿದ ರೀತಿಯಲ್ಲಿ ಅಂಥ ಮಾಲೀಕನಿಗೆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಮತ್ತು ಸ್ಥಳದಲ್ಲಿ ಹಾಜರಾಗಲು ಮತ್ತು ಅವನ ವಿವರಪಟ್ಟಿಕೆಯು ಸಮರ್ಥನೆಯಲ್ಲಿ ಆಧರಿಸುವಂಥ ಎಲ್ಲಾ ಸಾಕ್ಷ್ಯವನ್ನು ಹಾಜರ್ಪಡಿಸಲು ಅಥವಾ ಹಾಜರ್ಪಡಿಸುವಂತೆ ಮಾಡಲು ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸುವಂತೆ ಅಂಥ ಸಾಕ್ಷ್ಯವನ್ನು ಹಾಜರುಪಡಿಸಲು ಅವನನ್ನು ಅಗತ್ಯಪಡಿಸಿ ನೋಟೀಸನ್ನು ಜಾರಿ ಮಾಡತಕ್ಕದ್ದು.

(ಖ) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿರುವ ದಿನಾಂಕದಂದು ಅಥವಾ ಆ ತರುವಾಯ ಸಾಧ್ಯವಾದಷ್ಟು ಬೇಗನೆ ಭೋಗವಸ್ತು ತೆರಿಗೆ ಅಧಿಕಾರಿ ಹಾಜರುಪಡಿಸಬಹುದಾದಂಥ ಎಲ್ಲಾ ಸಾಕ್ಷ್ಯವನ್ನು ಪರ್ಯಾಲೋಚಿಸಿದ ತರುವಾಯ ಮಾಲೀಕನಿಂದ ಬರಬೇಕಾದ ತೆರಿಗೆಯ ಮೊಬಲಗನ್ನು ನಿರ್ಧರಿಸತಕ್ಕದ್ದು.

(ಗ) ಮಾಲೀಕನು (ಕ) ಖಂಡದ ಮೇರೆಗೆ ಅವನಿಗೆ ಕೊಡಲಾದ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ತಪ್ಪಿದರೆ ಭೋಗ ವಸ್ತು ತೆರಿಗೆ ಅಧಿಕಾರಿಯು ಅವನಿಂದ ಬರಬೇಕಾದ ತೆರಿಗೆಯ ಮೊಬಲಗನ್ನು ಅವನ ಅತ್ಯುತ್ತಮ ವಿವೇಚನೆಯ ಮೇರೆಗೆ ನಿರ್ಧರಿಸತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನು 5ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ ಯಾವುದೇ ಅವಧಿಗೆ ಸಂಬಂಧಿಸಿದಂತೆ ವಿವರಪಟ್ಟಿಕೆಯನ್ನು ಒದಗಿಸಲು ತಪ್ಪಿದರೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಮಾಲೀಕನಿಗೆ ಕೊಟ್ಟ ತರುವಾಯ ಭೋಗವಸ್ತು ತೆರಿಗೆ ಅಧಿಕಾರಿಯು ಅವನಿಂದ ಬರಬೇಕಾದ ತೆರಿಗೆಯ ಮೊಬಲಗು ಯಾವುದಾದರೂ ಇದ್ದರೆ ಅದನ್ನು ಅವನ ಅತ್ಯುತ್ತಮ ವಿವೇಚನೆಯ ಮೇರೆಗೆ ನಿರ್ಧರಿಸತಕ್ಕದ್ದು.

(4) ಈ ಪ್ರಕರಣದ ಮೇರೆಗೆ ಮಾಡಿದ ಯಾವುದೇ ತೆರಿಗೆ ನಿರ್ಧರಣೆಯು, ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿನ ಯಾವುದೇ ದಂಡನೆ ಅಥವಾ ಯಾವುದೇ ಪ್ರಾಸಿಕ್ಯೂಷನ್‌ಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**"6ಕ. ನೋಂದಾಯಿತ ಮಾಲೀಕನಿಂದ ತೆರಿಗೆಯ ಸಂಗ್ರಹಣೆ ಮತ್ತು ಕಾನೂನು ಬಾಹಿರ ಅಥವಾ ಹೆಚ್ಚಿಗೆಯಾಗಿ ಸಂಗ್ರಹಿಸಿದ ತೆರಿಗೆಗಳ ಮುಟ್ಟುಗೋಲು:–** (1) ಈ ಅಧಿನಿಯಮದ ಮೇರೆಗೆ ನೋಂದಾಯಿತವಾಗಿಲ್ಲದ ಮಾಲೀಕನು ಈ ಅಧಿನಿಯಮದ ಮೇರೆಗೆ ತೆರಿಗೆಯ ರೂಪದಲ್ಲಿ ಅಥವಾ ತೆರಿಗೆ ರೂಪದಲ್ಲಿ ಎಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸತಕ್ಕದ್ದಲ್ಲ ಮತ್ತು ನೋಂದಾಯಿತ ಮಾಲೀಕನು 3ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ದರವನ್ನು ಮೀರಿದ ದರದಲ್ಲಿ ತೆರಿಗೆ ರೂಪದಲ್ಲಿ ಅಥವಾ ತೆರಿಗೆ ರೂಪದಲ್ಲಿ ಎಂದು ತಾತ್ಪರ್ಯವಾಗುವ ಯಾವುದೇ ಮೊಬಲಗನ್ನು ಸಂಗ್ರಹಿಸತಕ್ಕದ್ದಲ್ಲ.

(2) ಯಾವನೇ ಮಾಲೀಕನು (1)ನೇ ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿದರೆ, ಭೋಗ ವಸ್ತು ತೆರಿಗೆ ಅಧಿಕಾರಿಯು, ಅಂಥ ಮಾಲೀಕನಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ,–

(ಕ) ಅನಧಿಕೃತವಾಗಿ ಸಂಗ್ರಹಿಸಿದ ಅಥವಾ ನಿಯಮಿಸಿದ ದರಕ್ಕಿಂತ ಹೆಚ್ಚಿಗೆಯಾಗಿ ಸಂಗ್ರಹಿಸಿದ ಮೊಬಲಗನ್ನು ಬರಹದಲ್ಲಿನ ಆದೇಶದ ಮೂಲಕ ರಾಜ್ಯ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳತಕ್ಕದ್ದು ಮತ್ತು

(ಖ) ಅದರ ಜೊತೆಗೆ, ಹಾಗೆ ಸಂಗ್ರಹಿಸಿದ ಮೊಬಲಗಿನ ಒಂದೂವರೆಯಷ್ಟನ್ನು ಮೀರಿದಂಥ ಮೊತ್ತವನ್ನು ಬರಹ ಆದೇಶದ ಮೂಲಕ ದಂಡನೆಯ ರೂಪದಲ್ಲಿ ಅವನ ಮೇಲೆ ವಿಧಿಸತಕ್ಕದ್ದು.

**7. ಕೆಲವು ಸಂದರ್ಭಗಳಲ್ಲಿ ದಂಡನೆಯನ್ನು ವಿಧಿಸುವುದು:–** ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಯಾವನೇ ಮಾಲೀಕನು,–

(ಕ) 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿರುವಂತೆ ವಿವರ ಪಟ್ಟಿಕೆಯನ್ನು ಒದಗಿಸಲು ಸಾಕಷ್ಟು ಕಾರಣಗಳಿಲ್ಲದೆ ತಪ್ಪಿದರೆ ಅಥವಾ ಉಪೇಕ್ಷಿಸಿದರೆ; ಅಥವಾ

(ಖ) 5ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ವಿವರಪಟ್ಟಿಕೆಯನ್ನು ಒದಗಿಸುವಲ್ಲಿ 5ನೇ ಪ್ರಕರಣದ (2)ನೇ ಉಪ–ಪ್ರಕರಣದ ಮೂಲಕ ಅಗತ್ಯಪಡಿಸಿದ ಅಂಥ ವಿವರಪಟ್ಟಿಕೆಗೆ ಅನುಸಾರವಾಗಿ ಅವನಿಂದ ಬರಬೇಕಾದ ಪೂರ್ಣ ಮೊಬಲಗನ್ನು ಸರ್ಕಾರಿ ಖಜಾನೆಗೆ ಸಂದಾಯ ಮಾಡಲು ಸಾಕಷ್ಟು ಕಾರಣಗಳಿಲ್ಲದೆ ತಪ್ಪಿದರೆ ಅಥವಾ ಉಪೇಕ್ಷಿಸಿದರೆ; ಅಥವಾ

(ಗ) 6ನೇ ಪ್ರಕರಣದ (2)ನೇ ಉಪ–ಪ್ರಕರಣದ (ಕ) ಖಂಡದ ಮೇರೆಗೆ ಅವನಿಗೆ ಕೊಡಲಾದ ನೋಟೀಸಿನ ನಿಬಂಧನೆಗಳನ್ನು ಪಾಲಿಸಲು ಸಾಕಷ್ಟು ಕಾರಣಗಳಿಲ್ಲದೇ ತಪ್ಪಿದರೆ; ಅಥವಾ

(ಘ) ಯಾವುದೇ ವ್ಯವಹಾರದ ವಿವರಗಳನ್ನು ಬಚ್ಚಿಟ್ಟರೆ ಅಥವಾ ತೆರಿಗೆಗೆ ಗುರಿಯಾದ ಯಾವುದೇ ವ್ಯವಹಾರದ ಅನಿಷ್ಟಕ್ಕೆ ವಿವರಗಳನ್ನು ಉದ್ದೇಶಪೂರ್ವಕವಾಗಿ ಒದಗಿಸಿದರೆ–

ಭೋಗವಸ್ತು ತೆರಿಗೆ ಅಧಿಕಾರಿಯು 6ನೇ ಪ್ರಕರಣದ ಮೇರೆಗೆ ನಿರ್ಧರಿಸಿದ ಯಾವುದೇ ತೆರಿಗೆಯ ಜೊತೆಗೆ ಅಂಥ ಮಾಲೀಕನ ಮೇಲೆ ತೆರಿಗೆ ಮೊಬಲಗಿನ ಒಂದೂವರೆಯಷ್ಟನ್ನು ಮೀರದ ಮೊತ್ತವನ್ನು ದಂಡದ ರೂಪದಲ್ಲಿ ವಿಧಿಸಬಹುದು.

**7ಕ. ತಪ್ಪಿಸಿಕೊಂಡ ತೆರಿಗೆಯ ನಿರ್ಧರಣೆ:–** (1) ಯಾವುದೇ ಕಾರಣಕ್ಕಾಗಿ ವಸತಿಗಾಗಿನ ಚಾರ್ಜುಗಳ ಪೂರ್ಣ ಅಥವಾ ಅದರ ಯಾವುದೇ ಭಾಗವು ತೆರಿಗೆ ನಿರ್ಧರಣೆಯಿಂದ ತಪ್ಪಿಸಿಕೊಂಡಿದ್ದರೆ ಅಥವಾ ಯಾವ ದರದಲ್ಲಿ ತೆರಿಗೆಯನ್ನು ನಿರ್ಧರಿಸಬೇಕಾಗಿತ್ತೋ ಆ ದರಕ್ಕಿಂತ ಕಡಿಮೆ ದರದಲ್ಲಿ ನಿರ್ಧರಿಸಲಾಗಿರುವಲ್ಲಿ ಭೋಗವಸ್ತು ತೆರಿಗೆಯ ಅಧಿಕಾರಿಯು ಆ ತೆರಿಗೆಯು ಸಂಬಂಧಪಡುವಂಥ ತಿಂಗಳು ಮುಕ್ತಾಯವಾದಂದಿನಿಂದ ಐದು ವರ್ಷಗಳ ಅವಧಿಯೊಳಗೆ ಯಾವುದೇ ಕಾಲದಲ್ಲಿ ಮಾಲೀಕನಿಗೆ ನೋಟೀಸನ್ನು ಕೊಟ್ಟ ತರುವಾಯ ಮತ್ತು ಅವನು ಅವಶ್ಯವೆಂದು ಪರ್ಯಾಲೋಚಿಸುವಂಥ ವಿಚಾರಣೆಯನ್ನು ಮಾಡಿದ ತರುವಾಯ ಅಂಥ ಚಾರ್ಜುಗಳ ಮೇಲೆ ಸಂದಾಯ ಮಾಡಬೇಕಾದ ತೆರಿಗೆಯನ್ನು ಅವನ ಅತ್ಯುತ್ತಮ ವಿವೇಚನೆಯ ಮೇರೆಗೆ ನಿರ್ಧರಿಸಲು ಮುಂದುವರಿಯಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ತೆರಿಗೆಯನ್ನು ನಿರ್ಧರಣೆ ಮಾಡುವಲ್ಲಿ ಭೋಗವಸ್ತು ತೆರಿಗೆ ಅಧಿಕಾರಿಯು ನಿರ್ಧರಣೆಯಿಂದ ತೆರಿಗೆಯು ತಪ್ಪಿಸಿಕೊಂಡಿರುವುದು ವಸತಿಗಾಗಿನ ಚಾರ್ಜುಗಳನ್ನು ಮಾಲೀಕನು ಬುದ್ಧಿಪೂರ್ವಕವಾಗಿ ಬಹಿರಂಗಪಡಿಸದಿರುವ ಕಾರಣದಿಂದ ಆಗಿದೆ ಎಂದು ಅವನಿಗೆ ಮನದಟ್ಟಾದರೆ, ಕಾರಣವನ್ನು ತೋರಿಸಲು ಯುಕ್ತ ಅವಕಾಶವನ್ನು ಕೊಟ್ಟ ತರುವಾಯ (1)ನೇ ಉಪ–ಪ್ರಕರಣದ ಮೇರೆಗೆ ನಿರ್ಧರಿಸಿದ ತೆರಿಗೆಯ ಜೊತೆಗೆ ಹಾಗೆ ನಿರ್ಧರಿಸಿದ ತೆರಿಗೆಯ ಒಂದೂವರೆಯಷ್ಟನ್ನು ಮೀರದ ದಂಡವನ್ನು ಸಂದಾಯ ಮಾಡಲು ನಿರ್ದೇಶಿಸಬಹುದು.

**8. ತೆರಿಗೆ ಮತ್ತು ದಂಡದ ಸಂದಾಯ:–** (1) (ಕ)

(i) ತೆರಿಗೆಗಾಗಿನ ಪೂರ್ಣ ಸಂದಾಯವನ್ನು ಮಾಡದೆ ವಿವರಪಟ್ಟಿಕೆಗಳನ್ನು ಒದಗಿಸದೆ ಇರುವಲ್ಲಿ, ಬರಬೇಕಾದ ತೆರಿಗೆ ಮೊಬಲಗನ್ನು;

(ii) ಯಾವುದೇ ಅವಧಿಗೆ ಸಂಬಂಧಿಸಿದಂತೆ ಮಾಲೀಕನು ಈಗಾಗಲೇ ಸಂದಾಯ ಮಾಡಿದ ಯಾವುದೇ ಮೊತ್ತವನ್ನು ಕಳೆದು ಅಂಥ ಅವಧಿಗಾಗಿ ನಿರ್ಧರಿಸಿದ ತೆರಿಗೆಯ ಮೊಬಲಗನ್ನು;

(ಖ) ಈ ಅಧಿನಿಯಮದ ಮೇರೆಗೆ ವಿಧಿಸಿದ ದಂಡದ ಮೊಬಲಗು ಯಾವುದಾದರೂ ಇದ್ದರೆ ಅದನ್ನು ಮಾಲೀಕನು ನಿಯಮಿಸಬಹುದಾದಂಥ ರೀತಿಯಲ್ಲಿ ಮತ್ತು ಈ ಉದ್ದೇಶಕ್ಕಾಗಿ ಭೋಗವಸ್ತು ತೆರಿಗೆ ಅಧಿಕಾರಿಯು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ನೋಟೀಸಿನ ಜಾರಿ ದಿನಾಂಕದಿಂದ ಮೂವತ್ತು ದಿನಗಳನ್ನು ಮೀರದ ದಿನಾಂಕದೊಳಗೆ ಸಂದಾಯ ಮಾಡತಕ್ಕದ್ದು.

ಪರಂತು, ಭೋಗವಸ್ತು ತೆರಿಗೆ ಅಧಿಕಾರಿಯು ಅಥವಾ 9ನೇ ಪ್ರಕರಣದ ಮೇರೆಗಿನ ಅಪೀಲಿನ ಅಪೀಲು ಪ್ರಾಧಿಕಾರವು, ಯಾವನೇ ಮಾಲೀಕನಿಗೆ ಸಂಬಂಧಿಸಿರುವಂತೆ ಮತ್ತು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಸಂದಾಯದ ದಿನಾಂಕವನ್ನು ವಿಸ್ತರಿಸಬಹುದು ಅಥವಾ ಆ ತೆರಿಗೆಯನ್ನು ಅಥವಾ ದಂಡವನ್ನು (ಯಾವುದಾದರೂ ಇದ್ದರೆ) ಕಂತುಗಳ ಮೂಲಕ ಸಂದಾಯ ಮಾಡಲು ಅವನಿಗೆ ಅವಕಾಶ ಕೊಡಬಹುದು,–

(1ಕ) (1)ನೇ ಉಪ–ಪ್ರಕರಣಕ್ಕನುಸಾರವಾಗಿ ಸಂದಾಯ ಮಾಡಲು ತಪ್ಪಿದರೆ–

(i) ತಪ್ಪಿದ ದಿನಾಂಕದಂದು ಬಾಕಿಯಿರುವ ತೆರಿಗೆ ಅಥವಾ ದಂಡದ ಬಗ್ಗೆ ಪೂರ್ಣ ಮೊಬಲಗು ಕೂಡಲೇ ಬಾಕಿಯಾಗತಕ್ಕದ್ದು ಮತ್ತು ಅದು ಅಂಥ ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನ ಸ್ವತ್ತುಗಳ ಮೇಲೆ ಋಣಭಾರವಾಗತಕ್ಕದ್ದು.

(ii) ಅಂಥ ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನು, ಬರಬೇಕಾದ ತೆರಿಗೆ ಅಥವಾ ದಂಡದ ಮೊಬಲಗಿನ ಶೇಕಡಾ 2ರಂತೆ ಪ್ರತಿ ತಿಂಗಳಿಗೆ ಅಥವಾ ಅದರ ಭಾಗಕ್ಕೆ ತೆರಿಗೆ ಅಥವಾ ದಂಡವು ಸಂದಾಯವಾಗದೆ ಉಳಿದಿರುವಂಥ ಅವಧಿಗಾಗಿ ಸರಳಬಡ್ಡಿಯನ್ನು ಸಂದಾಯ ಮಾಡತಕ್ಕದ್ದು.

(2) ಸಂದಾಯದ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿನಾಂಕದಂದು ಅಥವಾ ಸಂದಾಯವನ್ನು ಮಾಡಲು ವಿಸ್ತರಿಸಿದ ದಿನಾಂಕದ ತರುವಾಯ, ಸಂದಾಯ ಮಾಡದೆ ಉಳಿದಿರುವ ಯಾವುದೇ ತೆರಿಗೆ ಅಥವಾ ದಂಡವನ್ನು ಮತ್ತು ಕ್ರಮಬದ್ಧವಾಗಿ ಸಂದಾಯ ಮಾಡದೇ ಇರುವ ಯಾವುದೇ ಕಂತನ್ನು.–

(ಕ) ಅದು ಭೂ ಕಂದಾಯದ ಬಾಕಿಯಾಗಿದಿದ್ದರೆ ಹೇಗೋ ಹಾಗೆ

(ಖ) ಯಾವನೇ ಮ್ಯಾಜಿಸ್ಟ್ರೇಟನಿಗೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಮ್ಯಾಜಿಸ್ಟ್ರೇಟನು ವಿಧಿಸಿದ ಜುಲ್ಮಾನೆಯಾಗಿದ್ದರೆ ಹೇಗೋ ಹಾಗೆ ವಸೂಲಿಯಾಗತಕ್ಕದ್ದು.

**8ಕ. ಕೆಲವು ಇತರ ವ್ಯಕ್ತಿಗಳಿಂದ ತೆರಿಗೆಯನ್ನು ವಸೂಲು ಮಾಡುವುದು:–** (1) ಭೋಗವಸ್ತು ತೆರಿಗೆ ಅಧಿಕಾರಿಯು ಯಾವುದೇ ಕಾಲದಲ್ಲಿ ಅಥವಾ ಕಾಲ ಕಾಲಕ್ಕೆ ಬರಹದಲ್ಲಿ ನೋಟೀಸಿನ ಮೂಲಕ (ಅದರ ಒಂದು ಪ್ರತಿಯನ್ನು ಭೋಗವಸ್ತು ತೆರಿಗೆ ಅಧಿಕಾರಿಗೆ ತಿಳಿದಿರುವ ಮಾಲೀಕನ ತಿಳಿದಿರುವ ಕೊನೆಯ ವಿಳಾಸಕ್ಕೆ ಕಳುಹಿಸಿ ಕೊಡತಕ್ಕುದು) ಮಾಲೀಕನಿಗೆ ಯಾವ ವ್ಯಕ್ತಿಯಿಂದ ಹಣವು ಬರಬೇಕಾಗಿದೆಯೋ ಆ ಯಾವನೇ ವ್ಯಕ್ತಿಯನ್ನು ಅಥವಾ ಮಾಲೀಕನಿಗಾಗಿ ಅಥವಾ ಅವನ ನಿಮಿತ್ತವಾಗಿ ಹಣವನ್ನು ಹೊಂದಿರುವ ಅಥವಾ ತರುವಾಯ ಹೊಂದಬಹುದಾದ ಯಾವನೇ ವ್ಯಕ್ತಿಯನ್ನು ಹಣವು ಬರಬೇಕಾದ ತಕ್ಷಣ ಅಥವಾ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದಲ್ಲಿ ಅಥವಾ ಅದರೊಳಗೆ (ಹಣವು ಬರಬೇಕಾಗುವುದಕ್ಕೆ ಅಥವಾ ಹೊಂದುವುದಕ್ಕೆ ಮುಂಚೆ ಅಲ್ಲ) ತೆರಿಗೆಯ ಬಾಕಿಗಳು ಅಥವಾ ದಂಡಕ್ಕೆ ಸಂಬಂಧಿಸಿದಂತೆ ಮಾಲೀಕನಿಂದ ಬರಬೇಕಾದ ಮೊಬಲಗನ್ನು ಅಥವಾ ಆ ಹಣವು ಆ ಮೊಬಲಗಿಗೆ ಸಮಾನವಾದಾಗ ಅಥವಾ ಅದಕ್ಕಿಂತ ಕಡಿಮೆಯಿದ್ದಾಗ ಆ ಪೂರ್ತಿ ಹಣವನ್ನು ಸಂದಾಯ ಮಾಡಲು ಸಾಕಷ್ಟಾಗಬಹುದಾದಂಥ ಹಣವನ್ನು ಭೋಗವಸ್ತು ತೆರಿಗೆ ಅಧಿಕಾರಿಗೆ ಸಂದಾಯ ಮಾಡಲು ಅಗತ್ಯಪಡಿಸಬಹುದು.

(2) ಭೋಗವಸ್ತು ತೆರಿಗೆ ಅಧಿಕಾರಿಯು, ಯಾವುದೇ ಕಾಲದಲ್ಲಿ ಅಥವಾ ಕಾಲ ಕಾಲಕ್ಕೆ ಅಂಥ ಯಾವುದೇ ನೋಟೀಸನ್ನು ತಿದ್ದುಪಡಿ ಮಾಡುವುದು ಅಥವಾ ರದ್ದುಪಡಿಸುವುದು ಅಥವಾ ಆ ನೋಟೀಸಿನ ಅನುಕರಣೆಯಲ್ಲಿ ಯಾವುದೇ ಸಂದಾಯವನ್ನು ಮಾಡಲು ಕಾಲವನ್ನು ವಿಸ್ತರಿಸಬಹುದು.

(3) ಈ ಪ್ರಕರಣದ ಮೇರೆಗಿನ ನೋಟೀಸಿನ ಪಾಲನೆಯಲ್ಲಿ ಯಾವುದೇ ಸಂದಾಯವನ್ನು ಮಾಡುವ ಯಾವನೇ ವ್ಯಕ್ತಿಯು ಆ ಮಾಲೀಕನ ಅಧಿಕಾರದ ಮೇರೆಗೆ ಸಂದಾಯವನ್ನು ಮಾಡಿರುವುದಾಗಿ ಭಾವಿಸತಕ್ಕದ್ದು ಮತ್ತು ಭೋಗವಸ್ತು ತೆರಿಗೆ ಅಧಿಕಾರಿಯು, ರಸೀತಿಯು ಆ ರಸೀತಿಯಲ್ಲಿ ಕಾಣಿಸಿದ ಮೊಬಲಗಿನಷ್ಟರ ಮಟ್ಟಿಗೆ ಅಂಥ ವ್ಯಕ್ತಿಯ ಹೊಣೆಗಾರಿಕೆಯನ್ನು ಉಚಿತ ಮತ್ತು ಸಾಕಷ್ಟಾದ ತೀರಿಕೆಯಾಗಿರತಕ್ಕದ್ದು.

(4) ಈ ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ಸ್ವೀಕರಿಸಿದ ತರುವಾಯ ಮಾಲೀಕನ ಬಗ್ಗೆ ಯಾವುದೇ ಹೊಣೆಗಾರಿಕೆಯನ್ನು ತೀರಿಸುವ ಯಾವನೇ ವ್ಯಕ್ತಿಯು ತೀರಿಸಿದ ಹೊಣೆಗಾರಿಕೆಯಷ್ಟರ ಮಟ್ಟಿಗೆ ಅಥವಾ ಈ ಅಧಿನಿಯಮದ ಮೇರೆಗೆ ಬರಬೇಕಾದ ಮೊಬಲಗಿಗಾಗಿ ಮಾಲೀಕನ ಹೊಣೆಗಾರಿಕೆಯಷ್ಟರ ಮಟ್ಟಿಗೆ ಇವುಗಳಲ್ಲಿ ಯಾವುದು ಕಡಿಮೆಯೋ ಅದಕ್ಕೆ ಭೋಗವಸ್ತು ತೆರಿಗೆ ಅಧಿಕಾರಿಗೆ ವೈಯಕ್ತಿಕವಾಗಿ ಹೊಣೆಗಾರನಾಗಿರತಕ್ಕುದು.

(5) ಈ ಪ್ರಕರಣದ ಮೇರೆಗೆ ನೋಟೀಸನ್ನು ಯಾರಿಗೆ ಕಳುಹಿಸಲಾಗಿದೆಯೋ ಆ ಯಾವನೇ ವ್ಯಕ್ತಿಯು, ತಗಾದೆ ಮಾಡಿದ ಮೊತ್ತ ಅಥವಾ ಅದರ ಯಾವುದೇ ಭಾಗವು ಅವನಿಂದ ಮಾಲೀಕನಿಗೆ ಬಾಕಿಯಿಲ್ಲದ ಅಥವಾ ಅವನು ಮಾಲೀಕನಿಗಾಗಿ ಅವನ ನಿಮಿತ್ತವಾಗಿ ಯಾವುದೇ ಹಣವನ್ನು ಅವನು ಹೊಂದಿಲ್ಲವೆಂಬ ಕಾರಣದ ಮೇಲೆ ಅದಕ್ಕೆ ಆಕ್ಷೇಪಿಸಿರುವಲ್ಲಿ, ಆಗ ಈ ಪ್ರಕರಣದಲ್ಲಿ ಅಡಕವಾಗಿರುವ ಯಾವುದೂ ತಗಾದೆ ಮಾಡಿದ ಮೊತ್ತ ಅಥವಾ ಅದರ ಯಾವುದೇ ಭಾಗವನ್ನು ಭೋಗವಸ್ತು ಅಧಿಕಾರಿಗೆ ಸಂದಾಯ ಮಾಡಲು ಅಂಥ ವ್ಯಕ್ತಿಯನ್ನು ಅಗತ್ಯಪಡಿಸಬಹುದೆಂದು ಭಾವಿಸತಕ್ಕದ್ದು.

(6) ಈ ಪ್ರಕರಣದ ಮೇರೆಗೆ ಭೋಗವಸ್ತು ತೆರಿಗೆ ಅಧಿಕಾರಿಗೆ ವ್ಯಕ್ತಿಯು ಸಂದಾಯ ಮಾಡಲು ಅಗತ್ಯಪಡಿಸಿರುವಂಥ ಅಥವಾ ಅವನು ವೈಯಕ್ತಿಕವಾಗಿ ಹೊಣೆಗಾರನಾಗಿರುವಂಥ ಯಾವುದೇ ಮೊಬಲಗನ್ನು ಅದು ಸಂದಾಯ ಮಾಡದೆ ಉಳಿದಿದ್ದರೆ ಸದರಿ ವ್ಯಕ್ತಿಯ ಸ್ವತ್ತುಗಳ ಮೇಲೆ ಋಣಭಾರವಾಗಿರತಕ್ಕದ್ದು ಮತ್ತು ಅದನ್ನು 8ನೇ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದ ರೀತಿಯಲ್ಲಿ ವಸೂಲ್ಮಾಡಬಹುದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ ಮಾಲೀಕನಿಗೆ ಬರಬೇಕಾದ ಮೊಬಲಗು ಅಥವಾ ಮಾಲೀಕನಿಗಾಗಿ ಅಥವಾ ಅವನ ನಿಮಿತ್ತವಾಗಿ ಹೊಂದಿದ ಹಣವನ್ನು ಅಂಥ ಮಾಲೀಕನು ಅಂಥ ವ್ಯಕ್ತಿಗೆ ಸಂದಾಯ ಮಾಡಬೇಕಾಗಿರಬಹುದಾದ ಅಂಥ ಕ್ಲೇಮುಗಳು ಯಾವುದಾದರೂ ಇದ್ದರೆ ಮತ್ತು ಕಾನೂನುಬದ್ಧವಾಗಿ ಅಸ್ಥಿತ್ವದಲ್ಲಿರಬಹುದಾದ ಅವುಗಳನ್ನು ಗಣನೆಗೆ ತೆಗೆದುಕೊಂಡ ತರುವಾಯ ಲೆಕ್ಕ ಹಾಕತಕ್ಕದ್ದು.

**8ಖ. ಫರ್ಮುಗಳ ಹೊಣೆಗಾರಿಕೆ:–** (1) ಈ ಅಧಿನಿಯಮದ ಮೇರೆಗೆ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಯಾವುದೇ ಫರ್ಮು ಹೊಣೆಯಾಗಿರುವಲ್ಲಿ, ಆ ಫರ್ಮು ಮತ್ತು ಆ ಫರ್ಮಿನ ಪ್ರತಿಯೊಬ್ಬ ಪಾಲುದಾರನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಅಂಥ ಸಂದಾಯಕ್ಕಾಗಿ ಹೊಣೆಗಾರನಾಗಿರತಕ್ಕದ್ದು.

(2) ಈ ಅಧಿನಿಯಮದ ಮೇರೆಗೆ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಫರ್ಮಿನ ಪಾಲುದಾರನು ನಿವೃತ್ತನಾದಲ್ಲಿ ಅವನು ತದ್ವಿರುದ್ಧವಾದ ಯಾವುದೇ ಕರಾರು ಇದ್ದಾಗ್ಯೂ ಅಥವಾ ಅವನ ನಿವೃತ್ತಿಯ ಕಾಲದಲ್ಲಿ ಸಂದಾಯವಾಗದೆ ಉಳಿದಿರುವ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ಮತ್ತು ನಿವೃತ್ತಿಯ ದಿನಾಂಕದವರೆಗೆ ಯಾವುದೇ ತೆರಿಗೆ ಅಥವಾ ದಂಡ ಅಥವಾ ಇತರ ಮೊಬಲಗನ್ನು ನಿರ್ಧರಿಸದೆ ಇದ್ಯಾಗ್ಯೂ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

(3) ಈ ಅಧಿನಿಯಮದ ಮೇರೆಗೆ ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಹೊಣೆಯಾಗಿರುವ ಫರ್ಮು ವಿಘಟಿತವಾದಾಗ ಅಥವಾ ಅದನ್ನು ಮುಂದುವರಿಸದೇ ಇರುವಾಗ ತೆರಿಗೆಯ ನಿರ್ಧರಣೆ ಮತ್ತು

ದಂಡನೆ ವಿಧಿಸುವಿಕೆಯನ್ನು ಆ ಫರ್ಮಿನ ವಿಘಟನೆ ಅಥವಾ ಮುಂದುವರಿಸುವಿಕೆಯು ಆಗಿಲ್ಲದಿದ್ದರೆ ಹೇಗೋ ಹಾಗೆ ಮಾಡತಕ್ಕದ್ದು ಮತ್ತು ವಿಘಟನೆ ಅಥವಾ ಮುಂದುವರಿಸುವಿಕೆಯ ಕಾಲದಲ್ಲಿ ಆ ಫರ್ಮಿನ ಪಾಲುದಾರನಾಗಿದ್ದ ಯಾವನೇ ವ್ಯಕ್ತಿಯು ಮತ್ತು ಮೃತನಾದ ಯಾವನೇ ಅಂಥ ವ್ಯಕ್ತಿಯು ಕಾನೂನು ಸಮ್ಮತ ಪ್ರತಿನಿಧಿಯು ನಿರ್ಧರಿಸಿದ ಅಥವಾ ವಿಧಿಸಿದ ತೆರಿಗೆ ಅಥವಾ ದಂಡವನ್ನು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಸಂದಾಯ ಮಾಡಲು ಹೊಣೆಗಾರನಾಗಿರತಕ್ಕದ್ದು.

**8ಗ. ವ್ಯವಹಾರದ ವರ್ಗಾವಣೆಯಾದ ಮೇಲೆ ಸಂದಾಯ ಮಾಡಬೇಕಾದ ತೆರಿಗೆ ಇತ್ಯಾದಿ:–** (1) ಈ ಅಧಿನಿಯಮದ ಮೇರೆಗೆ ತೆರಿಗೆ ಅಥವಾ ದಂಡ ಅಥವಾ ಇತರೆ ಯಾವುದೇ ಮೊಬಲಗನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನ ವ್ಯವಹಾರದ ಒಡೆತನವು, ವರ್ಗಾವಣೆಯಾದಾಗ ವರ್ಗಾವಣೆ ಕರ್ತ ಮತ್ತು ವರ್ಗಾವಣೆ ಪಡೆದವನು ಅಂಥ ವ್ಯವಹಾರಕ್ಕೆ ಸಂಬಂಧಿಸಿದಂತೆ ವರ್ಗಾವಣೆಯ ಕಾಲದಲ್ಲಿ ಸಂದಾಯವಾಗದೆ ಉಳಿದಿರುವಂಥ ತೆರಿಗೆ ಅಥವಾ ದಂಡ ಅಥವಾ ಯಾವುದೇ ಇತರ ಮೊಬಲಗನ್ನು ಸಂದಾಯ ಮಾಡಲು ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಹೊಣೆಗಾರನಾಗಿರತಕ್ಕದ್ದು ಮತ್ತು ವರ್ಗಾವಣೆ ಪಡೆದವನಿಂದ ವಸೂಲ್ಮಾಡುವ ಉದ್ದೇಶಕ್ಕಾಗಿ ಅಂಥ ವರ್ಗಾವಣೆ ಪಡೆದವನನ್ನು ಈ ಅಧಿನಿಯಮದ ಮೇರೆಗಿನ ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನೆಂಬುದಾಗಿ ಭಾವಿಸತಕ್ಕದ್ದು.

(2) ಮಾಲೀಕನು ಮೃತಪಟ್ಟಿರುವಲ್ಲಿ ಅವನ ನಿರ್ವಾಹಕ, ಆಡಳಿತಗಾರ ಅಥವಾ ಇತರ ಕಾನೂನು ಸಮ್ಮತ ಪ್ರತಿನಿಧಿಯನ್ನು ಈ ಅಧಿನಿಯಮದ ಉದ್ದೇಶಕ್ಕಾಗಿ ಮಾಲೀಕನೆಂಬುದಾಗಿ ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಉಪಬಂಧಗಳು ಆ ಮೃತ ಹೊಂದಿದ ಮಾಲೀಕನ ವ್ಯವಹಾರಕ್ಕೆ ಸಂಬಂಧಿಸಿದಂತೆ ಅವನಿಗೆ ಅನ್ವಯವಾಗತಕ್ಕದ್ದು.

ಪರಂತು, ಅಂಥ ಯಾವನೇ ಮಾಲೀಕನು ಸಂದಾಯ ಮಾಡಬೇಕೆಂದು ನಿರ್ಧರಿಸಿದ ಯಾವುದೇ ತೆರಿಗೆ ಅಥವಾ ದಂಡ ಅಥವಾ ಅವನು ಮೃತಪಟ್ಟಿಲ್ಲದೆ ಇದ್ದಿದ್ದರೆ ಈ ಅಧಿನಿಯಮದ ಮೇರೆಗೆ ಅವನು ಸಂದಾಯ ಮಾಡಬೇಕಾಗಿದ್ದಂಥ ಯಾವುದೇ ತೆರಿಗೆ ಅಥವಾ ದಂಡಕ್ಕೆ ಸಂಬಂಧಿಸಿದಂತೆ ನಿರ್ವಾಹಕ ಆಡಳಿತಗಾರ ಅಥವಾ ಇತರ ಕಾನೂನು ಸಮ್ಮತ ಪ್ರತಿನಿಧಿಯು ಮೃತಪಟ್ಟವನ ಆಸ್ತಿಗಳು ಅವನಲ್ಲಿರುವಷ್ಟರಮಟ್ಟಿಗೆ ಮಾತ್ರ ಹೊಣೆಗಾರನಾಗಿರತಕ್ಕದ್ದು.

(3) ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಹೊಣೆಯಾದ ಅವಿಭಕ್ತ ಹಿಂದೂ ಕುಟುಂಬ ಅಥವಾ ಅಳಿಯ ಸಂತಾನ ಕುಟುಂಬವು ವಿಭಜನೆಗೊಂಡಾಗ ತೆರಿಗೆಯ ನಿರ್ಧರಣೆ ಮತ್ತು ದಂಡದ ವಿಧಿಸುವಿಕೆಯನ್ನು ಆ ಕುಟುಂಬದ ಯಾವುದೇ ವಿಭಜನೆಯು ಆಗಿಲ್ಲದಿದ್ದರೆ ಹೇಗೋ ಹಾಗೆ ಮಾಡತಕ್ಕುದು ಮತ್ತು ವಿಭಜನೆಗೆ ಮುಂಚೆ ಕುಟುಂಬದ ಸದಸ್ಯನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯು ನಿರ್ಧರಿಸಿದ ಅಥವಾ ವಿಧಿಸಿದ ತೆರಿಗೆ ಅಥವಾ ದಂಡವನ್ನು ಸಂದಾಯ ಮಾಡಲು ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಹೊಣೆಗಾರನಾಗಿರತಕ್ಕದ್ದು.

**9. ಅಪೀಲು:–** ಈ ಅಧಿನಿಯಮದ ಉಪಬಂಧಗಳ ಮೇರೆಗೆ ತೆರಿಗೆ ನಿರ್ಧರಣಾ ಆದೇಶದಿಂದ ಅಥವಾ ದಂಡನೆಯನ್ನು ವಿಧಿಸುವ ಆದೇಶದಿಂದ ಬಾಧಿತನಾದ ಯಾವನೇ ಮಾಲೀಕನು ಆ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ತಿಂಗಳ ಒಳಗಾಗಿ ನಿಯಮಿಸಿದ ಪ್ರಾಧಿಕಾರಕ್ಕೆ (ಇಲ್ಲಿ ಇನ್ನು ಮುಂದೆ ಅಪೀಲು ಪ್ರಾಧಿಕಾರವೆಂದು ಉಲ್ಲೇಖಿಸಲಾಗಿದೆ) ಅಪೀಲನ್ನು ಮಾಡಿಕೊಳ್ಳಬಹುದು.

**"**(2) (1)ನೇ ಉಪ–ಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ ಅಪೀಲು ಪ್ರಾಧಿಕಾರವು ಅಪೀಲುದಾರನಿಗೆ ಅಹವಾಲು ಹೇಳಿಕೊಳ್ಳಲು ಅವಕಾಶವನ್ನು ಕೊಟ್ಟ ತರುವಾಯ;–

(ಕ) ಆ ತೆರಿಗೆ ನಿರ್ಧರಣೆಯನ್ನು ಅಥವಾ ದಂಡವನ್ನು ಸ್ಥಿರೀಕರಿಸತಕ್ಕದ್ದು, ಇಳಿಸತಕ್ಕುದು, ಹೆಚ್ಚಿಸತಕ್ಕದ್ದು, ರದ್ದುಗೊಳಿಸತಕ್ಕದ್ದು ಅಥವಾ ಮಾರ್ಪಾಟು ಮಾಡತಕ್ಕದ್ದು; ಅಥವಾ

(ಖ) ತೆರಿಗೆ ನಿರ್ಧರಣಾ ಆದೇಶ ಅಥವಾ ದಂಡವನ್ನು ವಿಧಿಸುವ ಆದೇಶವನ್ನು ರದ್ದುಪಡಿಸತಕ್ಕುದು ಮತ್ತು ನಿರ್ದೇಶಿಸಬಹುದಾದಂಥ ವಿಚಾರಣೆಯ ತರುವಾಯ ಹೊಸ ಆದೇಶವನ್ನು ಮಾಡಲು ಭೋಗ ವಸ್ತು ತೆರಿಗೆ ಅಧಿಕಾರಿಗೆ ನಿರ್ದೇಶಿಸತಕ್ಕದ್ದು ಅಥವಾ

(ಗ) ಅದು ಯೋಗ್ಯವೆಂದು ಯೋಚಿಸಬಹುದಾದಂಥ ಆದೇಶಗಳನ್ನು ಮಾಡತಕ್ಕದ್ದು."

**10. ಪುನರೀಕ್ಷಣೆ:–** ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರ ಹೆಸರಿಸಬಹುದಾದಂಥ ಅಧಿಕಾರಿಯು (ಇಲ್ಲಿ ಇನ್ನು ಮುಂದೆ **'ಹೆಸರಿಸಿದ ಅಧಿಕಾರಿ'** ಎಂದು ಉಲ್ಲೇಖಿಸಲಾಗಿದೆ) ತಾನಾಗಿಯೇ ಅಥವಾ ಈ ಬಗ್ಗೆ ಮಾಡಿಕೊಂಡ ಅರ್ಜಿಯ ಮೇಲೆ ಭೋಗ ವಸ್ತು ತೆರಿಗೆ ಅಧಿಕಾರಿ ಅಥವಾ ಸಂದರ್ಭಾನುಸಾರ ಅಪೀಲು ಪ್ರಾಧಿಕಾರವು ಮಾಡಿದ ಆದೇಶದ ವ್ಯವಹರಣೆಯ ದಾಖಲೆಯನ್ನು ತರಿಸಿಕೊಳ್ಳಬಹುದು ಮತ್ತು ಪರೀಕ್ಷಿಸಬಹುದು ಮತ್ತು ಅದು ಅಥವಾ ಅವನು ನ್ಯಾಯಸಮ್ಮತ ಮತ್ತು ಉಚಿತವೆಂದು ಯೋಚಿಸಬಹುದಾದಂಥ ಆದೇಶವನ್ನು ಅದರ ಬಗ್ಗೆ ಮಾಡಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ಯಾವುದೇ ಅರ್ಜಿಯನ್ನು ಆದೇಶದ ದಿನಾಂಕದಿಂದ ನಾಲ್ಕು ತಿಂಗಳ ಅವಧಿಯೊಳಗಾಗಿ ಮಾಡಿಲ್ಲದಿದ್ದರೆ ಪುರಸ್ಕರಿಸತಕ್ಕದ್ದಲ್ಲ.

(3) ಯಾವನೇ ವ್ಯಕ್ತಿಗೆ ಪ್ರತಿಕೂಲವಾಗಿ ಬಾಧಕವಾಗುವಂಥ ಯಾವುದೇ ಆದೇಶವನ್ನು ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ಅಥವಾ ಸಂದರ್ಭಾನುಸಾರ ಹೆಸರಿಸಿದ ಅಧಿಕಾರಿಯು ಅಂಥ ವ್ಯಕ್ತಿಗೆ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ಕೊಡಲಾಗಿದ್ದ ಹೊರತು ಮಾಡತಕ್ಕದ್ದಲ್ಲ.

(4) 9ನೇ ಪ್ರಕರಣದ ಮೇರೆಗೆ ಅಪೀಲನ್ನು ಹೂಡುವ ಅವಕಾಶವಿರುವಲ್ಲಿ ಮತ್ತು ಯಾವುದೇ ಅಪೀಲನ್ನು ಮಾಡಿಕೊಳ್ಳದಿದ್ದರೆ ಅಂಥ ಅರ್ಜಿಯ ಮೇಲೆ ಯಾವುದೇ ಪುನರೀಕ್ಷಣಾ ವ್ಯವಹರಣೆಗಳನ್ನು ಪುರಸ್ಕರಿಸತಕ್ಕದ್ದಲ್ಲ.

(5) ರಾಜ್ಯ ಸರ್ಕಾರವು ಅಥವಾ ಸಂದರ್ಭಾನುಸಾರ ಹೆಸರಿಸಿದ ಅಧಿಕಾರಿಯು ಈ ಪ್ರಕರಣದ ಮೇರೆಗೆ ಪುನರೀಕ್ಷಣೆಗಾಗಿನ ಯಾವುದೇ ಅರ್ಜಿಯನ್ನು ತಿರಸ್ಕರಿಸುವಲ್ಲಿ ಅದು ಅಥವಾ ಅವನು ಹಾಗೆ ತಿರಸ್ಕರಣೆಗಾಗಿನ ಕಾರಣವನ್ನು ದಾಖಲು ಮಾಡತಕ್ಕದ್ದು.

**"10ಕ. ತಪ್ಪುಗಳನ್ನು ಸರಿಪಡಿಸುವುದು:–** (1) ದಾಖಲೆಯಿಂದ ಕಂಡು ಬರುವ ಯಾವುದೇ ತಪ್ಪನ್ನು ಸರಿಪಡಿಸುವ ದೃಷ್ಟಿಯಿಂದ ಭೋಗವಸ್ತು ತೆರಿಗೆ ಅಧಿಕಾರಿ ಅಪೀಲು ಪ್ರಾಧಿಕಾರ ಅಥವಾ ಪುನರೀಕ್ಷಣಾ ಪ್ರಾಧಿಕಾರಿಯು ಸಂದರ್ಭಾನುಸಾರ ಅವನು ಅಥವಾ ಅದು ಮಾಡಿದ ಆದೇಶದ ದಿನಾಂಕದಿಂದ ಐದು ವರ್ಷಗಳ ಒಳಗಾಗಿ ಯಾವುದೇ ಕಾಲದಲ್ಲಿ ಅಂಥ ಆದೇಶವನ್ನು ತಿದ್ದುಪಡಿ ಮಾಡಬಹುದು:

ಪರಂತು, ತೆರಿಗೆ ನಿರ್ಧರಣೆಯನ್ನು ಹೆಚ್ಚಿಸುವ ಅಥವಾ ಅನ್ಯಥಾ ಮಾಲೀಕನ ಹೊಣೆಗಾರಿಕೆಯನ್ನು ಹೆಚ್ಚಿಸುವ ಪರಿಣಾಮವುಳ್ಳ ತಿದ್ದುಪಡಿಯನ್ನು ಸಂದರ್ಭಾನುಸಾರ ಭೋಗ ವಸ್ತು ತೆರಿಗೆ ಅಧಿಕಾರಿ, ಅಪೀಲು ಪ್ರಾಧಿಕಾರಿ ಅಥವಾ ಪುನರೀಕ್ಷಣಾ ಪ್ರಾಧಿಕಾರ ಮಾಲೀಕನಿಗೆ ಅವನ ಅಥವಾ ಅದರ ಉದ್ದೇಶದ ಬಗ್ಗೆ ನೋಟೀಸನ್ನು ಮಾಲೀಕನಿಗೆ ಕೊಟ್ಟಿದ್ದ ಹೊರತು ಮತ್ತು ಮಾಲೀಕನಿಗೆ ಅವನ ಅಹವಾಲನ್ನು ಹೇಳಿಕೊಳ್ಳಲು ಅವಕಾಶ ಕೊಟ್ಟಿದ್ದ ಹೊರತು ಮಾಡತಕ್ಕದ್ದಲ್ಲ.

(1) (1)ನೇ ಉಪ–ಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಯಾವ ಮೂಲ ಆದೇಶದಲ್ಲಿ ತನ್ನನ್ನು ಸರಿಪಡಿಸಲಾಯಿತೋ ಆ ಮೂಲ ಆದೇಶವನ್ನು ಮಾಡಿದ್ದಂಥ ಕಾನೂನಿನ ಅದೇ ಉಪಬಂಧಗಳ ಮೇರೆಗೆ ಮಾಡಿದ ಆದೇಶವೆಂಬುದಾಗಿ ಭಾವಿಸತಕ್ಕದ್ದು.

(2) ಅಂಥ ಸರಿಪಡಿಸುವಿಕೆಯು ತೆರಿಗೆ ನಿರ್ಧರಣೆ ಅಥವಾ ದಂಡವನ್ನು ಇಳಿಸುವ ಪರಿಣಾಮವನ್ನು ಹೊಂದಿರುವಲ್ಲಿ ಆ ತೆರಿಗೆ ನಿರ್ಧರಣಾ ಪ್ರಾಧಿಕಾರವು ಆ ಮಾಲೀಕನಿಗೆ ಬರಬೇಕಾಗಬಹುದಾದಂಥ ಯಾವುದೇ ಮರುಪಾವತಿಯನ್ನು ಮಾಡತಕ್ಕದ್ದು."

**11. ಅಪೀಲು ಮತ್ತು ಪುನರೀಕ್ಷಣೆ ಅರ್ಜಿಯ ಮೇಲೆ ನ್ಯಾಯಾಲಯ ಫೀಜು:–** ಕರ್ನಾಟಕ ನ್ಯಾಯಾಲಯ ಫೀಜುಗಳು ಮತ್ತು ದಾವೆಗಳ ಮೌಲ್ಯ ನಿರ್ಣಯ ಅಧಿನಿಯಮ, 1958ರಲ್ಲಿ (ಕರ್ನಾಟಕ ಅಧಿನಿಯಮ, 1958ರ 16) ಏನೇ ಅಡಕವಾಗಿದ್ದಾಗ್ಯೂ 9ನೇ ಪ್ರಕರಣದ ಮೇರೆಗೆ ಮಾಡಿಕೊಂಡ ಅಪೀಲು ಹಾಗೂ 10ನೇ ಪ್ರಕರಣದ ಮೇರೆಗೆ ಮಾಡಿಕೊಂಡ ಪುನರೀಕ್ಷಣಾ ಅರ್ಜಿಯು ನಿಯಮಿಸಬಹುದಾದಂಥ ಮೌಲ್ಯದ ನ್ಯಾಯಾಲಯ ಫೀಜಿನ ಸ್ಟ್ಯಾಂಪನ್ನು ಹೊಂದಿರತಕ್ಕದ್ದು.

**12. ತೆರಿಗೆಯ ಮರುಪಾವತಿ:–** (1) ಯಾವನೇ ಮಾಲೀಕನು ತೆರಿಗೆಯ ಮೊಬಲಗನ್ನು ಲೆಕ್ಕ ಹಾಕುವಲ್ಲಿ ಯಾವುದೇ ಅವಧಿಗೆ ಸಂಬಂಧಿಸಿದಂತೆ ಅವನು ಯಾವುದೇ ಲಿಪಿಕ ಅಥವಾ ಗಣಿತ ದೋಷದ ಕಾರಣದಿಂದ ಸಂದಾಯ ಮಾಡಿದ ಅಥವಾ ಅವನಿಂದ ವಸೂಲ್ಮಾಡಿದ ತೆರಿಗೆಯ ಮೊಬಲಗು ಆ ಅವಧಿಗಾಗಿ ಈ ಅಧಿನಿಯಮದ ಮೇರೆಗೆ ಅವನಿಗೆ ಸರಿಯಾಗಿ ವಿಧಿಸಬಹುದಾದಂಥ ಮೊಬಲಗನ್ನು ಮೀರಿದೆಯೆಂದು ಭೋಗವಸ್ತು ತೆರಿಗೆ ಅಧಿಕಾರಿಗೆ ಮನದಟ್ಟು ಮಾಡಿಕೊಟ್ಟರೆ ಅವನು ಹಾಗೆ ಸಂದಾಯ ಮಾಡಿದ ಹೆಚ್ಚಿಗೆಯ ದರ ಮರುಪಾವತಿಗೆ ಅಥವಾ ಅದನ್ನು ವಸೂಲ್ಮಾಡಿಕೊಳ್ಳುವುದಕ್ಕೆ ಮಾಲೀಕನು ಹಕ್ಕುಳ್ಳವನಾಗಿರತಕ್ಕದ್ದು.

(2) 9 ಅಥವಾ 10ನೇ ಪ್ರಕರಣದ ಮೇರೆಗೆ ಮಾಡಿದ ಆದೇಶದ ಪರಿಣಾಮವಾಗಿ ಮಾಲೀಕನಿಗೆ ಯಾವುದೇ ಮೊಬಲಗಿನ ಮರುಪಾವತಿ ಬರಬೇಕಾದರೆ ಭೋಗ ವಸ್ತು ತೆರಿಗೆ ಅಧಿಕಾರಿಯು ಅವನಿಗೆ ಅಂಥ ಮೊಬಲಗನ್ನು ಮರುಪಾವತಿ ಮಾಡತಕ್ಕದ್ದು.

(3) ಆ ಮರುಪಾವತಿಯನ್ನು ನಗದು ಸಂದಾಯದ ಮೂಲಕವಾಗಿಯಾಗಲಿ ಅಥವಾ ಇತರ ಯಾವುದೇ ಅವಧಿಗೆ ಸಂಬಂಧಿಸಿದಂತೆ ಅಂಥ ಮಾಲೀಕನಿಗೆ ಬರಬೇಕಾದ ತೆರಿಗೆ ಮೊಬಲಗಿನಲ್ಲಿ ಅಂಥ ಹೆಚ್ಚಿನದನ್ನು ಮುರಿದುಕೊಳ್ಳುವ ಮೂಲಕವಾಗಿಯಾಗಲಿ ಕೊಡಬಹುದು.

**13. ಅಪರಾಧಗಳು:–** (1) ಈ ಅಧಿನಿಯಮದ ಮೇರೆಗೆ ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾದ ಮಾಲೀಕನಾಗಿರುವ ಯಾವನೇ ವ್ಯಕ್ತಿಯು;–

(ಕ) ಸರಿಯಲ್ಲದ ಅಥವಾ ಅಪೂರ್ಣ ವಿವರಪಟ್ಟಿಕೆಯನ್ನು ಒದಗಿಸಿದರೆ ಅಥವಾ ಒದಗಿಸಲು ಅವಕಾಶ ಮಾಡಿಕೊಟ್ಟರೆ ಅಥವಾ ಒದಗಿಸುವಂತೆ ಮಾಡಿದರೆ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಉಪಬಂಧಗಳ ಮೇರೆಗೆ ಅಗತ್ಯಪಡಿಸಿದಂತೆ ವಿವರಪಟ್ಟಿಯನ್ನು ಒಪ್ಪಿಸಲು ತಪ್ಪಿದರೆ;

(ಖ) ಅವನಿಂದ ಬರಬೇಕಾದ ಯಾವುದೇ ತೆರಿಗೆಯ ಸಂದಾಯವನ್ನು ಮೋಸದಿಂದ ತಪ್ಪಿಸಿದರೆ ಅಥವಾ ಬಚ್ಚಿಡಲು ಅವಕಾಶ ಮಾಡಿಕೊಟ್ಟರೆ; ಅಥವಾ

(ಗ) ಒದಗಿಸಿದ ಯಾವುದೇ ವಿವರಪತ್ರ ಅಥವಾ ಯಾವುದೇ ಲೆಕ್ಕಪತ್ರಗಳು ಅಥವಾ ರಿಜಿಸ್ಟರಿನಲ್ಲಿ ಯಾವುದೇ ತಪ್ಪು ನಮೂದನ್ನು ಮೋಸದಿಂದ ಮಾಡಿದರೆ ಅಥವಾ ಮಾಡಿಸಿದರೆ ಅಥವಾ ಹಾಗೆ ಮಾಡಲು ಅವಕಾಶ ಕೊಟ್ಟರೆ ಅಥವಾ ಅವುಗಳಲ್ಲಿ ಯಾವುದೇ ನಮೂದನ್ನು ಮೋಸದಿಂದ ಲೋಪಿಸಿದರೆ ಅಥವಾ ಲೋಪಿಸುವಂತೆ ಮಾಡಿದರೆ ಅಥವಾ ಲೋಪಿಸಲು ಅವಕಾಶ ಮಾಡಿಕೊಟ್ಟರೆ ; ಅಥವಾ

(ಘ) ಈ ಅಧಿನಿಯಮದ ಉಪಬಂಧಗಳ ಮೇರೆಗೆ ಅವನು ಸಂದಾಯ ಮಾಡಬೇಕಾದ ತೆರಿಗೆ ಮೊಬಲಗಿಗಿಂತ ಹೆಚ್ಚಿಗೆಯಾಗಿ ತೆರಿಗೆಯ ರೂಪದಲ್ಲಿ ಯಾವುದೇ ಮೊಬಲಗನ್ನು ಯಾವನೇ ವ್ಯಕ್ತಿಯಿಂದ ತಿಳಿದೂ ಸಂಗ್ರಹಿಸಿದರೆ; ಅಥವಾ

(ಙ) ಈ ಅಧಿನಿಯಮದ ಯಾವುದೇ ಉಪಬಂಧವನ್ನು ಅದರ ಮೇರೆಗೆ ರಚಿಸಿದ ನಿಯಮಗಳ ಅಥವಾ ಅದಕ್ಕೆ ಅನುಸಾರವಾಗಿ ಮಾಡಿದ ಕಾನೂನುಬದ್ಧ ಆದೇಶವನ್ನು ಉಲ್ಲಂಘಿಸಿ ಉದ್ದೇಶಪೂರ್ವಕವಾಗಿ ಕಾರ್ಯನಿರ್ವಹಿಸಿದರೆ–

ಅಪರಾಧ ನಿರ್ಣಯವಾದ ಮೇಲೆ ಆರು ತಿಂಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಅಥವಾ ಇನ್ನೂರ ಐವತ್ತು ರೂಪಾಯಿಗಳಿಗೆ ಕಡಿಮೆಯಿಲ್ಲದಂಥ ಆದರೆ ಎರಡು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ಅಥವಾ ಅವರೆಡರಿಂದಲೂ ದಂಡಿತನಾಗತಕ್ಕದ್ದು.

(2) ಯಾವುದೇ ನ್ಯಾಯಾಲಯವು (1)ನೇ ಉಪ–ಪ್ರಕರಣದ ಮೇರೆಗೆ ದಂಡನೀಯವಾದ ಯಾವುದೇ ಅಪರಾಧದ ಸಂಜ್ಞಾನವನ್ನು, ಅಂಥ ಅಪರಾಧವನ್ನು ಸ್ಥಾಪಿಸುವ ಸಂಗತಿಗಳನ್ನು ಭೋಗವಸ್ತು ತೆರಿಗೆ ಅಧಿಕಾರಿಯು ಬರಹದಲ್ಲಿ ಮಾಡಿದ ವರದಿಯ ಮೇಲೆ ಹೊರತು (–) ತೆಗೆದುಕೊಳ್ಳತಕ್ಕದ್ದಲ್ಲ.

**14. ಕಂಪನಿಗಳಿಂದ ಅಪರಾಧಗಳು:–** (1) ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಅಪರಾಧವನ್ನು ಮಾಡಿದ್ದ ಕಾಲದಲ್ಲಿ ಆ ಕಂಪನಿಯ ಪ್ರಭಾರದಲ್ಲಿದ್ದ ಮತ್ತು ಕಂಪನಿಗೆ, ಕಂಪನಿಯ ವ್ಯವಹಾರವನ್ನು ನಡೆಸುವುದಕ್ಕೆ ಆ ಕಂಪನಿಗೆ ಜವಾಬ್ದಾರನಾಗಿದ್ದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಅಪರಾಧದ ಬಗ್ಗೆ ತಪ್ಪಿತಸ್ಥನಾಗಿರುವುದಾಗಿ ಭಾವಿಸತಕ್ಕದ್ದು ಮತ್ತು ಅವರ ವಿರುದ್ಧ ವ್ಯವಹರಣೆಗೆ ಮತ್ತು ಅದಕ್ಕನುಸಾರವಾಗಿ ದಂಡನೆಗೆ ಗುರಿಯಾಗತಕ್ಕದ್ದು.

ಪರಂತು, ಈ ಉಪ–ಪ್ರಕರಣದಲ್ಲಿ ಅಡಕವಾಗಿರುವುದಾವುದೂ, ಅಂಥ ಅಪರಾಧವು ಅವನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಎಲ್ಲಾ ಯುಕ್ತ ಶ್ರದ್ಧೆಯನ್ನು ವಹಿಸಿದ್ದೆನೆಂದು ಅವನು ರುಜುವಾತುಪಡಿಸಿದರೆ ಈ ಅಧಿನಿಯಮದಲ್ಲಿ ಉಪಬಂಧಿಸಿದ ಯಾವುದೇ ದಂಡನೆಗೆ ಗುರಿಯಾಗಿಸತಕ್ಕದ್ದಲ್ಲ.

(2) (1)ನೇ ಉಪ–ಪ್ರಕರಣದಲ್ಲಿ ಏನೇ ಅಡಕವಾಗಿದ್ದಾಗ್ಯೂ, ಈ ಅಧಿನಿಯಮದ ಮೇರೆಗಿನ ಅಪರಾಧವನ್ನು ಒಂದು ಕಂಪನಿಯು ಮಾಡಿರುವಲ್ಲಿ ಮತ್ತು ಅಪರಾಧವನ್ನು ಕಂಪನಿಯ ಯಾವನೇ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ಅಥವಾ ಪರೋಕ್ಷ ಸಮ್ಮತಿಯಿಂದ ಮಾಡಲಾಗಿದೆಯೆಂದು ರುಜುವಾತಾದರೆ ಅಥವಾ ಅವರ ಯಾವುದೇ ನಿರ್ಲಕ್ಷ್ಯತೆಯ ಕಾರಣದಿಂದ ನಡೆಯಿತೆಂದು ಆರೋಪಿಸಬಹುದಾದರೆ ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯು ಅವನ ವಿರುದ್ಧದ ವ್ಯವಹರಣೆಗೆ ಮತ್ತು ದಂಡನೆಗೆ ಗುರಿಯಾಗತಕ್ಕದ್ದು.

**ವಿವರಣೆ.–** ಈ ಪ್ರಕರಣದ ಉದ್ದೇಶಗಳಿಗಾಗಿ,–

(ಕ) **"ಕಂಪನಿ"** ಎಂದರೆ ಒಂದು ನಿಗಮಿತ ನಿಕಾಯ ಮತ್ತು ಅದು ಒಂದು ಫರ್ಮು ಅಥವಾ ವ್ಯಕ್ತಿಗಳ ಇತರ ಸಂಸ್ಥೆಯನ್ನು ಒಳಗೊಳ್ಳುತ್ತದೆ, ಮತ್ತು

(ಖ) ಒಂದು ಫರ್ಮಿಗೆ ಸಂಬಂಧಪಟ್ಟಂತೆ 'ನಿರ್ದೇಶಕ' ಎಂದರೆ ಫರ್ಮಿನ ಒಬ್ಬ ಪಾಲುದಾರ.

**15. ಅಪರಾಧಗಳ ರಾಜಿ:–** (1) ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು ಭೋಗವಸ್ತು ತೆರಿಗೆ ಅಧಿಕಾರಿ ಅಥವಾ 17ನೇ ಪ್ರಕರಣದ (1)ನೇ ಉಪ–ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ಈ ಅಧಿನಿಯಮದ ಮೇರೆಗಿನ ಅಪರಾಧಕ್ಕಾಗಿ ವ್ಯವಹರಣೆಗಳನ್ನು ಹೂಡುವ ಮುಂಚೆಯಾಗಲಿ ಅಥವಾ ತರುವಾಯವೇ ಆಗಲಿ ಆ ಅಪರಾಧವನ್ನು ಮಾಡಿರುವ ಅಥವಾ ಮಾಡಿರುವನೆಂದು ಶಂಕಿಸಲಾಗಿರುವ ಯಾವನೇ ವ್ಯಕ್ತಿಗೆ ಆ ಭೋಗವಸ್ತು ತೆರಿಗೆ ಅಧಿಕಾರಿ ಅಥವಾ ಅಂಥ ಅಧಿಕೃತಗೊಳಿಸಿದ ಅಧಿಕಾರಿಯು ನಿರ್ಧರಿಸಬಹುದಾದಂತೆ ಅಪರಾಧಕ್ಕೆ ಸಂಬಂಧಪಟ್ಟಂಥ ತೆರಿಗೆಯ ಮೊಬಲಗಿನ ಎರಡರಷ್ಟನ್ನು ಮೀರದ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಆ ಅಪರಾಧವನ್ನು ರಾಜಿ ಮಾಡಿಕೊಳ್ಳಲು ಅನುಮತಿ ಕೊಡಬಹುದು.

(2) (1)ನೇ ಉಪ–ಪ್ರಕರಣದ ಮೇರೆಗೆ ಭೋಗವಸ್ತು ತೆರಿಗೆ ಅಧಿಕಾರಿ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯು ನಿರ್ಧರಿಸಬಹುದಾದಂಥ ಮೊತ್ತವನ್ನು ಸಂದಾಯ ಮಾಡಿದ ಮೇಲೆ ಅದೇ ಅಪರಾಧಕ್ಕೆ ಸಂಬಂಧಿಸಿದಂತೆ ಆ ವ್ಯಕ್ತಿಯ ವಿರುದ್ಧ ಯಾವುದೇ ಹೆಚ್ಚಿನ ವ್ಯವಹರಣೆಗಳನ್ನು ಕೈಗೊಳ್ಳತಕ್ಕದ್ದಲ್ಲ.

**16. ಹಾಜರಾತಿ, ಇತ್ಯಾದಿಗಳನ್ನು ಒತ್ತಾಯಪಡಿಸಲು ಅಧಿಕಾರಗಳು:–** ಈ ಅಧಿನಿಯಮದ ಮೇರೆಗಿನ ಎಲ್ಲಾ ಪ್ರಾಧಿಕಾರಗಳು, ಈ ಅಧಿನಿಯಮದ ಉದ್ದೇಶಕ್ಕಾಗಿ ದಾವೆಯನ್ನು ಅಧಿವಿಚಾರಣೆ ಮಾಡುವಲ್ಲಿ ಯಾವನೇ ವ್ಯಕ್ತಿಯ ಹಾಜರಾತಿಯನ್ನು ಒತ್ತಾಯಿಸಲು ಮತ್ತು ಅವನನ್ನು ಪ್ರಮಾಣ ಅಥವಾ ದೃಢೀಕರಣದ ಮೇಲೆ ಪರೀಕ್ಷಿಸಲು ಅಥವಾ ಯಾವುದೇ ದಸ್ತಾವೇಜನ್ನು ಹಾಜರುಪಡಿಸುವುದನ್ನು ಒತ್ತಾಯಿಸುವುದಕ್ಕೆ ಸಂಬಂಧಿಸಿದಂತೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 1908 (ಕೇಂದ್ರಧಿನಿಯಮ 1908ರ 5)ರ ಮೇರೆಗೆ ನ್ಯಾಯಾಲಯದಲ್ಲಿ ನಿಹಿತವಾಗಿರುವಂಥದೇ ಆದ ಅಧಿಕಾರಗಳನ್ನು ಹೊಂದಿರತಕ್ಕದ್ದು.

**17. ಲೆಕ್ಕಪತ್ರಗಳು ಮತ್ತು ದಸ್ತಾವೇಜುಗಳನ್ನು ಪರಿಶೀಲಿಸಲು ಮತ್ತು ಹೋಟೆಲುಗಳನ್ನು ಶೋಧಿಸಲು ಅಧಿಕಾರಗಳು:–** (1) ಭೋಗ ವಸ್ತು ತೆರಿಗೆ ಅಧಿಕಾರಿ ಅಥವಾ ಈ ಬಗ್ಗೆ ರಾಜ್ಯ ಸರ್ಕಾರವು ಅಧಿಕೃತಗೊಳಿಸಿದ ಯಾವನೇ ಅಧಿಕಾರಿಯು ನಿಯಮಿಸಿದ ಷರತ್ತುಗಳಿಗೆ ಒಳಪಟ್ಟು ಯಾವನೇ ಮಾಲೀಕನನ್ನು ಲೆಕ್ಕಪತ್ರಗಳ ಕೆಲಸದ ದಾಖಲೆಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ಅವನ ಮುಂದೆ ಹಾಜರ್ಪಡಿಸಲು ಅಥವಾ ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಾಗಬಹುದಾದ ಆ ಹೋಟೆಲಿನ ವ್ಯವಹಾರಕ್ಕೆ ಸಂಬಂಧಪಟ್ಟ ಯಾವುದೇ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಬಹುದು.

(2) ಯಾವುದೇ ಹೋಟೆಲಿನ ವ್ಯವಹಾರಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರಗಳ ಎಲ್ಲಾ ಕೆಲಸದ ದಾಖಲೆಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳು ಎಲ್ಲಾ ಯುಕ್ತ ಕಾಲಗಳಲ್ಲಿ ಭೋಗವಸ್ತು ತೆರಿಗೆ ಅಧಿಕಾರಿ ಅಥವಾ ಅಧಿಕೃತಗೊಳಿಸಿದ ಅಧಿಕಾರಿಯಿಂದ ಪರಿಶೀಲನೆಗೆ ಮುಕ್ತವಾಗಿರತಕ್ಕದ್ದು ಮತ್ತು ಅಂಥ ಭೋಗವಸ್ತು ತೆರಿಗೆ ಅಧಿಕಾರಿಯು ಅಂಥ ಭೋಗವಸ್ತುಗಳಿಗಾಗಿನ ಚಾರ್ಜುಗಳ ನಿಷ್ಕೃಷ್ಟತೆಯನ್ನು ಪರೀಕ್ಷಿಸುವ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂತೆ ಅಥವಾ ಯಾವ ವಿವರಣೆಗಳ ಬಗ್ಗೆ ಈ ಅಧಿನಿಯಮ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಉದ್ದೇಶಕ್ಕಾಗಿ ಅವನಿಗೆ ಅವಶ್ಯವೆಂದು ಕಂಡುಬಂದ ಮಾಹಿತಿಯು ಬೇಕಾಗಿದೆಯೋ ಆ ವಿಷಯಗಳ ಬಗ್ಗೆ ಅವನು ತಿಳಿದುಕೊಳ್ಳುವುದಕ್ಕಾಗಿ ಅಂಥ ದಾಖಲೆಗಳ ಅಂಥ ಪ್ರತಿಗಳು ಅಥವಾ ಉಧೃತಗಳನ್ನು ತೆಗೆದುಕೊಳ್ಳಬಹುದು ಅಥವಾ ತೆಗೆದುಕೊಳ್ಳುವಂತೆ ಮಾಡಬಹುದು.

(3) ಭೋಗವಸ್ತು ತೆರಿಗೆ ಅಧಿಕಾರಿ ಅಥವಾ ಅಧಿಕೃತಗೊಳಿಸಿದ ಅಧಿಕಾರಿ ಯಾವನೇ ಮಾಲೀಕನು ಅವನಿಂದ ಬರಬೇಕಾದ ತೆರಿಗೆ ಸಂದಾಯವನ್ನು ತಪ್ಪಿಸಿರುತ್ತಾನೆಂದು ಅಥವಾ ತಪ್ಪಿಸಲು ಪ್ರಯತ್ನಿಸುತ್ತಿದ್ದಾನೆಂದು ನಂಬಲು ಕಾರಣವಿದ್ದರೆ ಅವನು ಬರಹದಲ್ಲಿ ದಾಖಲು ಮಾಡಬೇಕಾದ ಕಾರಣಗಳಿಗಾಗಿ ಅವಶ್ಯವಾಗಬಹುದಾದಂಥ ಮಾಲೀಕನ ಲೆಕ್ಕಪತ್ರಗಳ ದಾಖಲೆಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ಅಭಿಗ್ರಹಿಸಬಹುದು ಮತ್ತು ಅದಕ್ಕಾಗಿ ಒಂದು ರಸೀದಿಯನ್ನು ಕೊಡತಕ್ಕದ್ದು ಮತ್ತು ಅವುಗಳನ್ನು ಈ ಅಧಿನಿಯಮದ ಮೇರೆಗಿನ ಯಾವುದೇ ವ್ಯವಹರಣೆಗೆ ಸಂಬಂಧಿಸಿದಂತೆ ಅಥವಾ ಪ್ರಾಸಿಕ್ಯೂಷನ್ನಿಗಾಗಿ ಅವಶ್ಯವಾಗಬಹುದಾದಷ್ಟು ಕಾಲ ಮಾತ್ರ ಇಟ್ಟುಕೊಳ್ಳತಕ್ಕದ್ದು.

(4) ಈ ಅಧಿನಿಯಮದ ಉದ್ದೇಶಗಳಿಗಾಗಿ ಭೋಗವಸ್ತು ತೆರಿಗೆ ಅಧಿಕಾರಿ ಅಥವಾ ಈ ಬಗ್ಗೆ ಅವನು ಅಧಿಕೃತಗೊಳಿಸಿದ ವ್ಯಕ್ತಿ ಅಥವಾ (1)ನೇ ಉಪ–ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಯು ಮಾಲೀಕನ ಯಾವುದೇ ಹೋಟೆಲು ಅಥವಾ ವ್ಯವಹಾರದ ಯಾವುದೇ ಸ್ಥಳ ಅಥವಾ ಹೋಟೆಲಿಗೆ ಸಂಬಂಧಪಟ್ಟಂತೆ ಅವನ ವ್ಯವಹಾರದ ಲೆಕ್ಕಪತ್ರಗಳ ಯಾವುವೇ ದಾಖಲೆಗಳು, ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳನ್ನು ಮಾಲೀಕನು ಇಟ್ಟಿದ್ದಾನೆಂದು ಅಥವಾ ತತ್ಕಾಲದಲ್ಲಿ ಇಟ್ಟುಕೊಂಡಿದ್ದಾನೆಂದು ಭೋಗವಸ್ತು ತೆರಿಗೆ ಅಧಿಕಾರಿ ಅಥವಾ (1)ನೇ ಉಪ–ಪ್ರಕರಣದ ಮೇರೆಗೆ ಅಧಿಕೃತಗೊಳಿಸಿದ ಅಧಿಕಾರಿಯು ನಂಬಲು ಕಾರಣವಿರುವ ಯಾವುದೇ ಇತರ ಸ್ಥಳವನ್ನು ಪ್ರವೇಶಿಸಬಹುದು ಮತ್ತು ಶೋಧಿಸಬಹುದು.

**18. ಕಾಲಪರಿಮಿತಿ ಅಧಿನಿಯಮದ ಕೆಲವು ಉಪಬಂಧಗಳು ಅಪೀಲು ಮತ್ತು ಪುನರೀಕ್ಷಣಾ ಅರ್ಜಿಗಳಿಗೆ ಅನ್ವಯವಾಗತಕ್ಕದ್ದು:–** ಕಾಲಪರಿಮಿತಿ ಅಧಿನಿಯಮ, 1963ರ (ಕೇಂದ್ರಧಿನಿಯಮ 1963ರ 36) 4, 5 ಮತ್ತು 12ನೇ ಪ್ರಕರಣಗಳ ಉಪಬಂಧಗಳು ಸಾಧ್ಯವಾದಷ್ಟು ಮಟ್ಟಿಗೆ 9ನೇ ಪ್ರಕರಣದ ಮೇರೆಗೆ ಅಪೀಲನ್ನು ಅಥವಾ

10ನೇ ಪ್ರಕರಣದ ಮೇರೆಗೆ ಪುನರೀಕ್ಷಣೆ ಅರ್ಜಿಯನ್ನು ಮಾಡಿಕೊಳ್ಳುವುದಕ್ಕಾಗಿನ ಅವಧಿಯನ್ನು ಲೆಕ್ಕ ಹಾಕುವಲ್ಲಿ ಅನ್ವಯವಾಗತಕ್ಕದ್ದು.

**19. ವ್ಯವಹರಣೆಗಳ ಪ್ರತಿಷೇಧ:–** ಈ ಅಧಿನಿಯಮದ ಮೇರೆಗೆ ಮಾಡಿದ ತೆರಿಗೆ ನಿರ್ಧರಣೆ ಅಥವಾ ಮಾಡಿದ ಆದೇಶವನ್ನು ರದ್ದುಗೊಳಿಸುವುದಕ್ಕೆ ಅಥವಾ ಮಾರ್ಪಾಟು ಮಾಡುವುದಕ್ಕೆ ಯಾವುದೇ ಸಿವಿಲ್ ನ್ಯಾಯಾಲಯದಲ್ಲಿ ಯಾವುದೇ ದಾವೆಯನ್ನು ಹೂಡತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಿದ ಯಾವುದೇ ನಿಯಮಗಳ ಅನುಸರಣೆಯಲ್ಲಿ ಸದ್ಭಾವದಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ರಾಜ್ಯ ಸರ್ಕಾರದ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡತಕ್ಕದ್ದಲ್ಲ.

**20. ನಿಯಮ ರಚನಾಧಿಕಾರ:–** (1) ರಾಜ್ಯ ಸರ್ಕಾರವು ತೆರಿಗೆ ಸಂದಾಯವನ್ನು ಸುನಿಶ್ಚಿತಗೊಳಿಸುವುದಕ್ಕಾಗಿ ಮತ್ತು ಸಾಮಾನ್ಯವಾಗಿ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ಯಾವುದೇ ನಿಯಮವನ್ನು ಪೂರ್ವಾನ್ವಯ ಪರಿಣಾಮದೊಂದಿಗೆ ರಚಿಸಬಹುದು ಮತ್ತು ಅಂಥ ನಿಯಮವನ್ನು ರಚಿಸಿದಾಗ ಆ ನಿಯಮವನ್ನು ರಚಿಸುವುದಕ್ಕಾಗಿ ಕಾರಣಗಳನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಇಟ್ಟ ವಿವರಪತ್ರದಲ್ಲಿ ನಿರ್ದಿಷ್ಟಪಡಿಸತಕ್ಕುದು. (3)ನೇ ಉಪ–ಪ್ರಕರಣದ ಮೇರೆಗೆ ಮಾಡಲಾದ ಯಾವುದೇ ಮಾರ್ಪಾಟಿಗೆ ಒಳಪಟ್ಟ, ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವು, ಅದನ್ನು ಈ ಅಧಿನಿಯಮದಲ್ಲಿ ಅಧಿನಿಯಮಿಸಲಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮಕಾರಿಯಾಗಿರತಕ್ಕದ್ದು.

(3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಟ್ಟ ಅಧಿವೇಶನ ಅಥವಾ ಅದಕ್ಕೆ ನಿಕಟೋತ್ತರದ ಅಧಿವೇಶನ ಮುಕ್ತಾಯವಾಗುವ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡು ಸದನಗಳು ಒಪ್ಪಿದರೆ ಆ ನಿಯಮವು ಆ ತರುವಾಯ ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.

**21. ತೊಂದರೆಗಳನ್ನು ನಿವಾರಿಸಲು ಅಧಿಕಾರ:–** ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ ರಾಜ್ಯ ಸರ್ಕಾರವು ಅಂಥ ತೊಂದರೆಯನ್ನು ನಿವಾರಿಸಲು ಅದಕ್ಕೆ ಅವಶ್ಯ ಅಥವಾ ವಿಹಿತವೆಂದು ಕಂಡುಬರುವಂಥ ಉಪಬಂಧಗಳನ್ನು ಅಧಿಸೂಚನೆಯ ಮೂಲಕ ಮಾಡಬಹುದು.

**ಪಿ. ವೆಂಕಟಸುಬ್ಬಯ್ಯ**
ಕರ್ನಾಟಕ ರಾಜ್ಯಪಾಲರು,
ಭಾರತ ರಾಷ್ಟ್ರಪತಿಗಳ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

**ಅರ್ಜುನಪ್ಪ**
ಸರ್ಕಾರದ ಅಧೀನ ಕಾರ್ಯದರ್ಶಿ,
ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಇಲಾಖೆ,
(ಪ್ರಕಟಣೆಗಳು)

**ಹಣಕಾಸು ಸಚಿವಾಲಯ**

**ಅಧಿಸೂಚನೆ**

**ಕ್ರಮಾಂಕ: ಎಫ್‌ಡಿ 54 ಸಿಎಸ್‌ಎಲ್ 79, ಬೆಂಗಳೂರು, ದಿನಾಂಕ 31ನೇ ಮೇ 1979**

ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979ರ (ಕರ್ನಾಟಕ ಅಧಿನಿಯಮ, 1979ರ ಸಂಖ್ಯೆ 22) 20ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು ಈ ಕೆಳಕಂಡ ನಿಯಮಗಳನ್ನು ಈ ಮೂಲಕ ರಚಿಸುತ್ತದೆ.*

1. **ಚಿಕ್ಕ ಹೆಸರು ಮತ್ತು ಪ್ರಾರಂಭ:–** (1) ಈ ನಿಯಮಗಳನ್ನು ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು, 1979 ಎಂದು ಕರೆಯತಕ್ಕದ್ದು.

(2) ಅವು ಕೂಡಲೇ ಜಾರಿಗೆ ಬರತಕ್ಕುದು.

2. **ಪರಿಭಾಷೆ:–** (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಕ) **"ಅಧಿನಿಯಮ"** ಎಂದರೆ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979.

(ಖ) **"ನಮೂನೆ"** ಎಂದರೆ ಈ ನಿಯಮಗಳಿಗೆ ಲಗತ್ತಿಸಿದ ನಮೂನೆ.

(ಗ) **"ಅತಿಥಿ"** ಎಂದರೆ, ಹೋಟೆಲಿನಲ್ಲಿ ಯಾರ ಹೆಸರಿನಲ್ಲಿ ಸ್ಥಳಾವಕಾಶವನ್ನು ಮೊದಲೇ ಗೊತ್ತುಪಡಿಸಲಾಗಿದೆಯೋ ಮತ್ತು ಈ ಅಧಿನಿಯಮದ ಮೇರೆಗೆ ಭೋಗವಸ್ತು ತೆರಿಗೆಯನ್ನು ಸಂದಾಯ ಮಾಡಲು ಯಾರು ಹೊಣೆಗಾರನಾಗಿರುವನೋ ಆ ವ್ಯಕ್ತಿ.

(ಘ) **"ಪ್ರಕರಣ"** ಎಂದರೆ ಅಧಿನಿಯಮದ ಪ್ರಕರಣ

(2) ಈ ನಿಯಮಗಳಲ್ಲಿ ಉಪಯೋಗಿಸಿದ ಆದರೆ ಪರಿಭಾಷಿಸಿಲ್ಲದ ಪದಗಳು ಹಾಗೂ ಪದಾವಳಿಗಳು ಅವುಗಳಿಗೆ ಅಧಿನಿಯಮದಲ್ಲಿ ಅನುಕ್ರಮವಾಗಿ ಕೊಟ್ಟ ಅರ್ಥವನ್ನೇ ಹೊಂದಿರತಕ್ಕದ್ದು.

3. **ಲೆಕ್ಕ ಪತ್ರಗಳನ್ನು ಇಟ್ಟುಕೊಂಡು ಬರುವುದು:–** (1) ಪ್ರತಿಯೊಬ್ಬ ಮಾಲೀಕನು.–

(ಕ) ಅವನ ಹೋಟೆಲಿನಲ್ಲಿ ಒದಗಿಸಿದ ಭೋಗ ವಸ್ತುವಿನ ಮತ್ತು ಅದಕ್ಕಾಗಿನ ದರದ ಮಾಹಿತಿಯನ್ನು 1ನೇ ನಮೂನೆಯಲ್ಲಿ,–

(ಖ) ಅವನ ಹೋಟೆಲಿನಲ್ಲಿ ವಸತಿ ಅನುಕೂಲವನ್ನು ಪಡೆದಿರುವುದರ ಬಗ್ಗೆ ಮತ್ತು ಅದಕ್ಕಾಗಿ ಭೋಗ ವಸ್ತು ತೆರಿಗೆಯ ಸಂಗ್ರಹಣೆಯ ದೈನಂದಿನ ಲೆಕ್ಕವನ್ನು ನಮೂನೆ IIರಲ್ಲಿ ಮತ್ತು

(ಗ) ಭೋಗ ವಸ್ತು ತೆರಿಗೆಯ ಸಂಗ್ರಹಣೆ ಮತ್ತು ಇರಸಾಲಿನ ಮಾಸಿಕ ಸಂಕ್ಷಿಪ್ತವನ್ನು ನಮೂನೆ IIರಲ್ಲಿ

–ಇಟ್ಟುಕೊಂಡು ಬರತಕ್ಕದ್ದು.

(2) ಮಾಲೀಕನು ಈ ಪ್ರತಿಯೊಂದು ನಮೂನೆಗಳಿಗೆ ಪ್ರತ್ಯೇಕವಾದ ಬೈಂಡು ಮಾಡಿದ ರಿಜಿಸ್ಟರನ್ನು ಇಡತಕ್ಕದ್ದು ಮತ್ತು ಅಂಥ ರಿಜಿಸ್ಟರಿನ ಪ್ರತಿಯೊಂದು ಪುಟಗಳಿಗೆ ಕ್ರಮ ಸಂಖ್ಯೆ ಕೊಡತಕ್ಕುದು. ಹಾಗೂ ಡೆಪ್ಯೂಟಿ ಕಮೀಷನರನಿಂದ ಅಥವಾ ಅವನಿಂದ ಈ ಬಗ್ಗೆ ಕ್ರಮಬದ್ಧವಾಗಿ ಅಧಿಕೃತಗೊಂಡ ಯಾವನೇ ಅಧಿಕಾರಿಯಿಂದ ಮೊಹರು ಮಾಡಿಸತಕ್ಕದ್ದು ಮತ್ತು ಪ್ರಮಾಣೀಕರಿಸಿಕೊಳ್ಳತಕ್ಕದ್ದು.

---

* 31–12–1985ರವರೆಗೆ ತಿದ್ದುಪಡಿಯಾದಂತೆ

**4. 5ನೇ ಪ್ರಕರಣದ ಮೇರೆಗೆ ವಿವರಪಟ್ಟಿಕೆಯ ನಮೂನೆ:–** (1) ಮಾಲೀಕನು 5ನೇ ಪ್ರಕರಣದಲ್ಲಿ ಉಪಬಂಧಿಸಿದ ಅವಧಿಯೊಳಗೆ ಡೆಪ್ಯೂಟಿ ಕಮೀಷರನಿಗೆ 3ನೇ ನಿಯಮದ ಮೇರೆಗೆ ಅವನು ಇಟ್ಟಕೊಂಡು ಬಂದಿರುವ I, II ಮತ್ತು III ನಮೂನೆಗಳನ್ನು ವಿವರಪಟ್ಟಿಕೆಯನ್ನು ಒಪ್ಪಿಸತಕ್ಕದ್ದು.

(2) ವಿವರಪಟ್ಟಿಕೆಗೆ ರುಜು ಮಾಡುವ ಪ್ರತಿಯೊಬ್ಬ ಮಾಲೀಕನು ಆ ವಿವರಪಟ್ಟಿಕೆಯಲ್ಲಿ ನಮೂದಿಸಿರುವ ಸಂಗತಿಗಳು ಅವನಿಗೆ ತಿಳಿದಿರುವಷ್ಟರ ಮಟ್ಟಿಗೆ ಮತ್ತು ನಂಬುವಷ್ಟರ ಮಟ್ಟಿಗೆ ನಿಜವಾಗಿದೆಯೆಂದು ಶ್ರದ್ಧಾಪೂರ್ವಕವಾಗಿ ದೃಢೀಕರಣಕ್ಕೆ ರುಜು ಮಾಡತಕ್ಕದ್ದು.

(3) ಡೆಪ್ಯೂಟಿ ಕಮೀಷನರನು ಆ ವಿವರಪಟ್ಟಿಕೆಗಳನ್ನು 3ನೇ ನಿಯಮದ ಮೇರೆಗೆ ಇಟ್ಟುಕೊಂಡು ಬಂದಿರುವ ಬೈಂಡು ಮಾಡಿದ ರಿಜಿಸ್ಟರುಗಳಿಂದ ಸರಿನೋಡಬಹುದು.

**5. ಮಾಲೀಕನು ಬಿಲ್ಲನ್ನು ನೀಡುವುದು ಇತ್ಯಾದಿ:–** ಈ ಅಧಿನಿಯಮದ ಮೇರೆಗೆ ಯಾವುದೇ ಭೋಗ ವಸ್ತು ತೆರಿಗೆಗೆ ಹೊಣೆಗಾರನಾದ ಪ್ರತಿಯೊಬ್ಬ ಅತಿಥಿಯಿಂದ ಅವನು ವಸೂಲಿ ಮಾಡಿದ ವಸತಿ ಅನುಕೂಲಕ್ಕಾಗಿನ ಚಾರ್ಜುಗಳಿಗೆ ಸಂಬಂಧಿಸಿದಂತೆ ಬಿಲ್ಲು ಅಥವಾ ನಗದು ಮೆಮೋವನ್ನು ಕೊಡತಕ್ಕದ್ದು ಮತ್ತು ಅಂಥ ಬಿಲ್ ಅಥವಾ ನಗದು ಮೆಮೋನಲ್ಲಿ ಹೋಟೆಲಿನ ಪೂರ್ಣ ಹೆಸರು, ವಸೂಲಿ ಮಾಡಿದ ಭೋಗವಸ್ತು ತೆರಿಗೆಯ ಮೊಬಲಗು ಅದನ್ನು ಯಾರಿಂದ ವಸೂಲಿ ಮಾಡಿದೆಯೋ ಆ ಅತಿಥಿಯ ಹೆಸರು ಮತ್ತು ಚಾರ್ಜುಗಳನ್ನು ಯಾವುದೇ ವಿದೇಶಿ ವಿನಿಮಯದಲ್ಲಿ ವಸೂಲು ಮಾಡಿರುವಲ್ಲಿ ಆ ಕರೆನ್ಸಿಯ ಹೆಸರು ಇವುಗಳನ್ನು ನಿರ್ದಿಷ್ಟಪಡಿಸತಕ್ಕದ್ದು.

**6. ಪ್ರಕ್ರಿಯೆ:–** ಅಧಿನಿಯಮದ 6ನೇ ಪ್ರಕರಣದ ಮೇರೆಗೆ ಭೋಗವಸ್ತು ತೆರಿಗೆಯನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಆ ಡೆಪ್ಯೂಟಿ ಕಮೀಷರನು ಮಾಲೀಕನಿಗೆ ನೋಟೀಸನ್ನು ಜಾರಿಗೊಳಿಸಿದ ದಿನಾಂಕದಿಂದ ಏಳು ದಿವಸಗಳಿಗಿಂತ ಮುಂಚಿತವಲ್ಲದ ದಿನಾಂಕದಂದು ಅದರಲ್ಲಿ ನಿರ್ದಿಷ್ಟಪಡಿಸಿದ ಸ್ಥಳದಲ್ಲಿ ಖುದ್ದಾಗಿಯಾಗಲಿ ಅಥವಾ ಬರಹದಲ್ಲಿ ಅಧಿಕೃತಗೊಳಿಸಿದ ಮತ್ತು ಏಜೆಂಟನ ಮೂಲಕವಾಗಲಿ ಹಾಜರಾಗಲು ಮತ್ತು 3ನೇ ನಿಯಮದ ಮೇರೆಗೆ ಇಟ್ಟುಕೊಂಡು ಬರಲಾದ ಬೈಂಡು ಮಾಡಿದ ರಿಜಿಸ್ಟರುಗಳನ್ನು ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಇತರ ದಸ್ತಾವೇಜುಗಳನ್ನು ಮತ್ತು ಅಂಥ ಮಾಲೀಕನು ತಾನು ಒದಗಿಸಿರಬಹುದಾದಂಥ ವಿವರಪಟ್ಟಿಕೆ ಯಾವುದಾದರೂ ಇದ್ದರೆ ಅದರ ಸಮರ್ಥನೆಯಲ್ಲಿ ಅವನು ಅವಲಂಬಿಸಬಹುದಾದ ಯಾವುದೇ ಇತರ ಸಾಕ್ಷ್ಯವನ್ನು ಹಾಜರ್ಪಡಿಸಲು ಅಥವಾ ಹಾಗೆ ಹಾಜರ್ಪಡಿಸುವಂತೆ ಮಾಡಲು ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಆ ಹೋಟೆಲಿನ ಕೆಲಸಕ್ಕೆ ಸಂಬಂಧಪಟ್ಟಂತೆ ಮಾಹಿತಿಯನ್ನು ಒದಗಿಸಲು ಅಗತ್ಯಪಡಿಸಿ ನೋಟೀಸನ್ನು ಜಾರಿ ಮಾಡಬಹುದು. ಈ ನಿಯಮದ ಉದ್ದೇಶಕ್ಕಾಗಿ ನೋಟೀಸು ನಮೂನೆ IVರಲ್ಲಿರತಕ್ಕದ್ದು.

(2) ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ದಿವಸದಂದು ಅಥವಾ ಆ ತರುವಾಯ ಸಾಧ್ಯವಾದಷ್ಟು ಬೇಗನೆ ಡೆಪ್ಯುಟಿ ಕಮೀಷನರರನು ಮಾಲೀಕನು ಹಾಜರುಪಡಿಸಿದ ರಿಜಿಸ್ಟರುಗಳು ಅಥವಾ ಇತರ ದಸ್ತಾವೇಜುಗಳು ಯಾವುದಾದರೂ ಇದ್ದರೆ ಅವುಗಳನ್ನು ಮತ್ತು ಆ ಮಾಲೀಕನು ಒದಗಿಸಿದ ಮಾಹಿತಿಯನ್ನು ಪರೀಕ್ಷಿಸಿದ ತರುವಾಯ ಮತ್ತು ಮಾಲೀಕನು ಹಾಜರುಪಡಿಸಬಹುದಾದಂಥ ಸಾಕ್ಷ್ಯವನ್ನು ಮತ್ತು ನಿರ್ದಿಷ್ಟಪಡಿಸಿದ ಅಂಶಗಳ ಮೇಲೆ ಡೆಪ್ಯುಟಿ ಕಮೀಷನರನು ಅಗತ್ಯಪಡಿಸಬಹುದಾದ ಇತರ ಸಾಕ್ಷ್ಯವನ್ನು ಪರೀಕ್ಷಿಸಿದ ತರುವಾಯ ಭೋಗವಸ್ತು ತೆರಿಗೆಯ ಮೊತ್ತವನ್ನು ನಿರ್ಧರಿಸತಕ್ಕದ್ದು.

(3) ಮಾಲೀಕನು 5ನೇ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ನಮೂದಿಸಿದ ಅವಧಿಯೊಳಗೆ ಆ ವಿವರ ಪಟ್ಟಿಕೆಯನ್ನು ಒಪ್ಪಿಸಲು ತಪ್ಪಿದರೆ ಡೆಪ್ಯುಟಿ ಕಮೀಷನರನು 6ನೇ ಪ್ರಕರಣದ (2)ನೇ ಉಪ–ಪ್ರಕರಣದಿಂದ ಉಪಬಂಧಿಸಿದಂತೆ ಭೋಗವಸ್ತು ತೆರಿಗೆ ಮೊಬಲಗನ್ನು ಅವನ ಅತ್ಯುತ್ತಮ ವಿವೇಚನೆಯ ಮೇರೆಗೆ ನಿರ್ಧರಿಸತಕ್ಕದ್ದು.

(4) ದಂಡನೆಯೇನಾದರೂ ಇದ್ದರೆ ಅದರೊಂದಿಗೆ (2) ಅಥವಾ (3)ನೇ ಉಪ ನಿಯಮದ ಮೇರೆಗೆ ತೆರಿಗೆ ನಿರ್ಧರಿಸಿದ ತರುವಾಯ ಡೆಪ್ಯುಟಿ ಕಮೀಷನರನು ನಮೂನೆ Vರಲ್ಲಿ ತೆರಿಗೆ ನಿರ್ಧರಣಾ ಆದೇಶವನ್ನು ಕೊಡತಕ್ಕದ್ದು.

(5) 8ನೇ ಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸು ನಮೂನೆ VIರಲ್ಲಿರತಕ್ಕದ್ದು.

**7. ದಂಡನೆಯನ್ನು ವಿಧಿಸುವ ಆದೇಶದ ನಮೂನೆ:–** 7ನೇ ಪ್ರಕರಣದ ಮೇರೆಗೆ ದಂಡನೆ ವಿಧಿಸುವ ಆದೇಶವು ನಮೂನೆ VIIರಲ್ಲಿರತಕ್ಕುದು.

**8. ಭೋಗವಸ್ತು ತೆರಿಗೆಯ ಮರುಪಾವತಿ:–** ಯಾವುದೇ ತಿಂಗಳಿಗೆ ಸಂಬಂಧಿಸಿದಂತೆ ತೆರಿಗೆಯಾಗಿ ಈಗಾಗಲೇ ಸಂದಾಯ ಮಾಡಿದ ಮೊಬಲಗು 6ನೇ ಪ್ರಕರಣದ ಮೇರೆಗೆ ಅಥವಾ 9ನೇ ಪ್ರಕರಣದ ಮೇರೆಗೆ ಅಪೀಲು ಯಾವುದಾದರೂ ಇದ್ದರೆ, ಅದರಲ್ಲಿ ಅಥವಾ 10ನೇ ಪ್ರಕರಣದ ಮೇರೆಗಿನ ಪುನರೀಕ್ಷಣೆ ಯಾವುದಾದರೂ ಇದ್ದರೆ ಅದರಲ್ಲಿ ನಿರ್ಧರಿಸಿದ ಮೊಬಲಗನ್ನು ಮೀರಿದರೆ ಡೆಪ್ಯೂಟಿ ಕಮೀಷನರನು 6ನೇ ಪ್ರಕರಣದ ಮೇರೆಗೆ ಕೊಡಲಾದಂಥ ನೋಟೀಸಿನ ಯಾವುದೇ ಮೊಬಲಗಿನ ವಸೂಲಿ ಬಗ್ಗೆ ಹೆಚ್ಚಿನ ಮೊಬಲಗನ್ನು ಹೊಂದಾಣಿಕೆ ಮಾಡಿದ ತರುವಾಯ, ಮಾಲೀಕನಿಗೆ ಸಂದರ್ಭಾನುಸಾರ ಖಜಾನೆ ಅಥವಾ ಭಾರತದ ರಿಜರ್ವ್ ಬ್ಯಾಂಕಿಗೆ ನಮೂನೆ VIIIರಲ್ಲಿ ಅಂಥ ಹೆಚ್ಚಿನ ಮೊಬಲಗಿನ ಶಿಲ್ಕು ಯಾವುದಾದರೂ ಇದ್ದರೆ ಅದರ ಮರುಪಾವತಿಗಾಗಿ ಆದೇಶವನ್ನು ಕೊಡತಕ್ಕದ್ದು.

**9. 9ನೇ ಪ್ರಕರಣದ ಮೇರೆಗೆ ಅಪೀಲು ಪ್ರಾಧಿಕಾರ.–** 9ನೇ ಪ್ರಕರಣದ ಉದ್ದೇಶಕ್ಕಾಗಿ ಅಪೀಲು ಪ್ರಾಧಿಕಾರವು ಕರ್ನಾಟಕ ಮಾರಾಟ ತೆರಿಗೆ ಅಧಿನಿಯಮ, 1957 (ಕರ್ನಾಟಕ ಅಧಿನಿಯಮ, 1957ರ ಸಂ. 25)ದ ಮೇರೆಗೆ ನೇಮಕಗೊಂಡ ವಾಣಿಜ್ಯ ತೆರಿಗೆಗಳ ಡೆಪ್ಯೂಟಿ ಕಮೀಷನರ್ ಆಗಿರತಕ್ಕದ್ದು.

**10. ಅಪೀಲು ಮತ್ತು ಪುನರೀಕ್ಷಣಾ ಅರ್ಜಿ.–** ಪ್ರತಿಯೊಂದು ಅಪೀಲು ಮತ್ತು ಪುನರೀಕ್ಷಣಾ ಅರ್ಜಿಯು.–

(ಕ) ಬರಹದಲ್ಲಿರತಕ್ಕದ್ದು

(ಖ) ಅಪೀಲುದಾರನ ಅಥವಾ ಅರ್ಜಿದಾರನ ಹೆಸರು ಮತ್ತು ವಿಳಾಸವನ್ನು ನಿರ್ದಿಷ್ಟಪಡಿಸತಕ್ಕದ್ದು.

(ಗ) ಯಾವ ಆದೇಶದ ವಿರುದ್ಧ ಅಪೀಲು ಮಾಡಿಕೊಳ್ಳಲಾಗಿದೆಯೋ ಅಥವಾ ಯಾವ ಆದೇಶದ ವಿರುದ್ಧ ಪುನರೀಕ್ಷಣಾ ಅರ್ಜಿಯನ್ನು ಮಾಡಿಕೊಳ್ಳಲಾಗಿದೆಯೋ ಆ ಆದೇಶದ ದಿನಾಂಕವನ್ನು ನಿರ್ದಿಷ್ಟಪಡಿಸತಕ್ಕದ್ದು.

(ಘ) ಸಂಗತಿಗಳ ಸ್ಪಷ್ಟ ನಿರೂಪಣೆಯನ್ನು ಒಳಗೊಂಡಿರತಕ್ಕದ್ದು.

(ಙ) ಕೋರಲಾದ ಪರಿಹಾರವನ್ನು ಖಚಿತವಾಗಿ ತಿಳಿಸತಕ್ಕದ್ದು, ಮತ್ತು

(ಚ) ಅಪೀಲುದಾರ ಅಥವಾ ಅರ್ಜಿದಾರ ಅಥವಾ ಈ ಬಗ್ಗೆ ಅವನಿಂದ ಬರಹದಲ್ಲಿ ಕ್ರಮಬದ್ಧವಾಗಿ ಅಧಿಕೃತಗೊಂಡ ಏಜೆಂಟನು ಈ ಕೆಳಕಂಡ ನಮೂನೆಯಲ್ಲಿ ರುಜು ಮಾಡತಕ್ಕದ್ದು ಮತ್ತು ಸತ್ಯಾಪನೆ ಮಾಡತಕ್ಕದ್ದು ಎಂದರೆ.–

"ಮೇಲ್ಕಂಡ ಅಪೀಲಿನ ವಿವರಪತ್ರ/ಪುನರೀಕ್ಷಣಾ ಅರ್ಜಿಯಲ್ಲಿ ಹೆಸರಿಸಿದ ಅಪೀಲುದಾರ/ಅರ್ಜಿದಾರನಾದ ------------ ನಾನು ಇದರಲ್ಲಿ ಹೇಳಿರುವ ಸಂಗತಿಗಳು ನಾನು ತಿಳಿದಿರುವಷ್ಟರ ಮಟ್ಟಿಗೆ ಮತ್ತು ನಂಬುವಷ್ಟರ ಮಟ್ಟಿಗೆ ನಿಜವಾದುದೆಂದು ಈ ಮೂಲಕ ಘೋಷಿಸುತ್ತೇನೆ".

ರುಜು

(2) ಅಪೀಲಿನ ವಿವರಪತ್ರ ಅಥವಾ ಪುನರೀಕ್ಷಣಾ ಅರ್ಜಿಯೊಂದಿಗೆ ರುಜು ಯಾವ ಆದೇಶದ ವಿರುದ್ಧ ಅಪೀಲು ಅಥವಾ ಆಕ್ಷೇಪಣೆಯನ್ನು ಮಾಡಲಾಗಿದೆಯೋ ಆ ಆದೇಶದ ಪ್ರಮಾಣೀಕರಿಸಿದ ಪ್ರತಿ ಮತ್ತು ಯಾವ ಆದೇಶದ ವಿರುದ್ಧ ಅಪೀಲು ಅಥವಾ ಆಕ್ಷೇಪಣೆಯನ್ನು ಮಾಡಲಾಗಿದೆಯೋ ಆ ಆದೇಶಕ್ಕೆ ಅನುಸಾರವಾಗಿ ಆ ಮೊಬಲಗಿನ ಸಂದಾಯವನ್ನು ಮಾಡಿದ ಬಗ್ಗೆ ಪ್ರಮಾಣ ಪತ್ರ ಇರತಕ್ಕದ್ದು.

(3) ಅಪೀಲಿನ ವಿವರಪತ್ರ ಅಥವಾ ಪುನರೀಕ್ಷಣಾ ಅರ್ಜಿಯನ್ನು ಅಪೀಲುದಾರ ಅಥವಾ ಅವನ ಏಜೆಂಟನು ಅಪೀಲು ಪ್ರಾಧಿಕಾರಕ್ಕೆ ಖುದ್ದಾಗಿ ಹಾಜರ್ಪಡಿಸತಕ್ಕದ್ದು ಅಥವಾ ಅದಕ್ಕೆ ರಿಜಿಸ್ಟರ್ಡ್ ಅಂಚೆಯ ಮೂಲಕ ಕಳುಹಿಸತಕ್ಕದ್ದು.

**11. ಅಪೀಲುಗಳಲ್ಲಿನ ಪ್ರಕ್ರಿಯೆ:–** ಡೆಪ್ಯೂಟಿ ಕಮೀಷನರ್‌ನ ಆದೇಶದ ಮೇಲೆ 9ನೇ ಪ್ರಕರಣದ ಮೇರೆಗಿನ ಅಪೀಲಿನಲ್ಲಿ ಅಪೀಲು ಪ್ರಾಧಿಕಾರವು ಸಾಧ್ಯವಾದಷ್ಟು ಮತ್ತು ಅವಶ್ಯ ಮಾರ್ಪಾಡುಗಳೊಂದಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ 1908ರ ಮೂಲಕ ಜಿಲ್ಲಾ ನ್ಯಾಯಾಲಯಕ್ಕೆ ಅಸಲು ಡಿಕ್ರಿಗಳ ಮೇಲೆ ಅಪೀಲುಗಳಿಗಾಗಿ ನಿಯಮಿಸಿದ ಆಚರಣೆ ಮತ್ತು ಪ್ರಕ್ರಿಯೆಯನ್ನು ಅನುಸರಿಸತಕ್ಕದ್ದು.

**12. ನ್ಯಾಯಾಲಯ ಫೀಜುಗಳು:–** 11ನೇ ಪ್ರಕರಣದ ಮೇರೆಗೆ ನ್ಯಾಯಾಲಯ ಸ್ಟಾಂಪುಗಳ ಮೌಲ್ಯವು ಈ ಕೆಳಕಂಡಂತೆ ಇರತಕ್ಕುದು ಎಂದರೆ.–

(ಕ) ಅಪೀಲಿನ ವಿವರಪತ್ರದ ಮೇಲೆ ಐದು ರೂಪಾಯಿಗಳು, ಮತ್ತು

(ಖ) ಪುನರೀಕ್ಷಣೆಗಾಗಿ ಅರ್ಜಿಯ ಮೇಲೆ ಹತ್ತು ರೂಪಾಯಿಗಳು,

**13. ಪರಿಶೀಲನೆಯ ಬಗ್ಗೆ ನೋಟೀಸು:–** ಆ ಡೆಪ್ಯೂಟಿ ಕಮೀಷನರನು ಅನಿರೀಕ್ಷಿತ ಭೇಟಿ ಕೊಡಲು ಅವಶ್ಯವೆಂದು ಭಾವಿಸಿದ ಹೊರತು ಅವನು ಅಧಿನಿಯಮದ 17ನೇ ಪ್ರಕರಣದ (1)ನೇ ಪ್ರಕರಣದ ಉದ್ದೇಶಗಳಿಗಾಗಿ ಬೈಂಡು ಮಾಡಿದ ರಿಜಿಸ್ಟರುಗಳನ್ನು ಒಳಗೊಂಡು ಕೆಲಸದ ದಾಖಲೆಗಳನ್ನು ಮತ್ತು ಲೆಕ್ಕ ಪತ್ರಗಳನ್ನು ಪರಿಶೀಲಿಸಲು ಅವನ ಉದ್ದೇಶದ ಬಗ್ಗೆ ಅಧಿನಿಯಮದ ಮೇರೆಗೆ ಭೋಗವಸ್ತು ತೆರಿಗೆಯನ್ನು ಸಂಗ್ರಹಿಸಲು ಮತ್ತು ಸಂದಾಯ ಮಾಡಲು ಹೊಣೆಯಾಗಿರುವ ಮಾಲೀಕನಿಗೆ ಬರಹದಲ್ಲಿ ಯುಕ್ತ ನೋಟೀಸನ್ನು ಕೊಡತಕ್ಕದ್ದು.

**14. ನೋಟೀಸುಗಳ ಜಾರಿ ಇತ್ಯಾದಿ:–** ಈ ಅಧಿನಿಯಮದ ಉಪಬಂಧಗಳ ಮೇರೆಗಿನ ನೋಟೀಸನ್ನು ಅದನ್ನು ಯಾರಿಗೆ ವಿಳಾಸಿಸಲಾಗಿದೆಯೋ ಆ ವ್ಯಕ್ತಿ ಅಥವಾ ಏಜೆಂಟನಿಗೆ ರಿಜಿಸ್ಟರ್ಡ್ ಅಂಚೆಯ ಮೂಲಕ ಅಥವಾ ವಶಾವಣೆ ಮಾಡುವ ಅಥವಾ ಕೊಡ ಮಾಡುವ ಮೂಲಕ ಅಥವಾ ಅದರ ಪ್ರತಿಯನ್ನು ಅಧಿನಿಯಮದ ಮೇರೆಗೆ ಭೋಗ ವಸ್ತು ತೆರಿಗೆಯನ್ನು ಸಂದಾಯ ಮಾಡಲು ಹೊಣೆಯಾಗಿರುವ ಮಾಲೀಕನ ಹೋಟೆಲಿನಲ್ಲಿನ ಅಥವಾ ಅವನ ವಾಸದ ಮನೆಯಲ್ಲಿನ ಯಾವುದೇ ಎದ್ದು ಕಾಣುವ ಸ್ಥಳದಲ್ಲಿ ಅಂಟಿಸುವ ಮೂಲಕ ಜಾರಿ ಮಾಡಬಹುದು.

**15. ದಸ್ತಾವೇಜುಗಳು ಮತ್ತು ಆದೇಶದ ಪ್ರಮಾಣಿತ ಪ್ರತಿಗಳು:–** (1) ಭೋಗ ವಸ್ತು ತೆರಿಗೆಯನ್ನು ಸಂದಾಯ ಮಾಡಲು ಹೊಣೆಗಾರನಾಗಿರುವ ಹೋಟೆಲಿನ ಮಾಲೀಕನು ಅವನು ಹಾಜರುಪಡಿಸಿದ ಅಥವಾ ದಾಖಲು ಮಾಡಿದ ಯಾವುದೇ ದಸ್ತಾವೇಜಿನ ಅಥವಾ ಡೆಪ್ಯೂಟಿ ಕಮೀಷನರನು ಮಾಡಿದ ಆದೇಶದ ಪ್ರಮಾಣಿತ ಪ್ರತಿಗಾಗಿ ಡೆಪ್ಯೂಟಿ ಕಮೀಷನರನಿಗೆ ಅರ್ಜಿ ಸಲ್ಲಿಸಬಹುದು.

(2) (1)ನೇ ಉಪ ನಿಯಮದ ಮೇರೆಗೆ ಮಾಡಿಕೊಂಡ ಅರ್ಜಿಯ ಜೊತೆಗೆ ಪ್ರತಿಯೊಂದು ಪುಟಕ್ಕೆ ಎರಡು ರೂಪಾಯಿಗಳ ದರದಲ್ಲಿ ಫೀಜನ್ನು ಸಂದಾಯ ಮಾಡಿದ್ದಕ್ಕೆ ರುಜುವಾತು ಇರತಕ್ಕದ್ದು.

**16. ಖಜಾನೆಗೆ ಅಥವಾ ಬ್ಯಾಂಕಿಗೆ ಹಣವನ್ನು ಸಂದಾಯ ಮಾಡುವ ವಿಧಾನ:–** (1) ಈ ಅಧಿನಿಯಮದ ಅಥವಾ ಈ ನಿಯಮಗಳ ಮೇರೆಗೆ ಸಂದಾಯ ಮಾಡಬೇಕಾದ ತೆರಿಗೆ ಅಥವಾ ಇತರ ವಿವಿಧ ಮೊಬಲಗುಗಳನ್ನು ಹೋಟೆಲಿನ ಮಾಲೀಕನು,–

(i) ಡೆಪ್ಯೂಟಿ ಕಮೀಷನರನಿಗೆ ಮನಿ ಆರ್ಡರ್ ಅಥವಾ ನಗದಿನ ಮೂಲಕ

(ii) ನಮೂನೆ ಸಂ. IXರಲ್ಲಿ ಚಲನ್ ಮೂಲಕ ಸರ್ಕಾರಿ ಖಜಾನೆಗೆ ಇರಸಾಲು ಮಾಡುವ ಮೂಲಕ,– ಸಂದಾಯ ಮಾಡತಕ್ಕದ್ದು.

(2) ಡೆಪ್ಯೂಟಿ ಕಮೀಷನರನಿಗೆ ನಗದಾಗಿ ಸಂದಾಯ ಮಾಡಿದ್ದಕ್ಕಾಗಿನ ಹಣಕ್ಕೆ ರಸೀದಿಯು ನಮೂನೆ ರಲ್ಲಿರತಕ್ಕದ್ದು.

(3) ಚಲನ್‌ಗಳನ್ನು ನಾಲ್ಕು ಪ್ರತಿಗಳಲ್ಲಿ ಭರ್ತಿ ಮಾಡತಕ್ಕದ್ದು ಮೂಲ ಹಾಗೂ ದ್ವಿಪ್ರತಿಗಳೆಂದು ಗುರುತು ಮಾಡಿದ ಪ್ರತಿಗಳನ್ನು ಸಂದಾಯ ಮಾಡಿದ್ದಕ್ಕೆ ರುಜುವಾತಾಗಿ ಕ್ರಮಬದ್ಧವಾದ ರಸೀದಿಯೊಂದಿಗೆ ಮಾಲೀಕನಿಗೆ ವಾಪಸ್ಸು ಮಾಡತಕ್ಕದ್ದು ಅದರ ದ್ವಿಪ್ರತಿಯೆಂದು ಗುರುತು ಮಾಡಿದ ಪ್ರತಿಯನ್ನು ತೆರಿಗೆ ನಿರ್ಧರಣಾ ಪ್ರಾಧಿಕಾರಿಗೆ ಒಪ್ಪಿಸಬೇಕಾದ ವಿವರಪಟ್ಟಿಕೆ ಅಥವಾ ವಿವರಪತ್ರಕ್ಕೆ ಅವನು ಲಗತ್ತಿಸತಕ್ಕದ್ದು.

ಎಂದು ಗುರುತು ಮಾಡಿದ ಮೂರನೇ ಪ್ರತಿಯನ್ನು ಮಾಸಿಕ ಲೆಕ್ಕ ಪತ್ರಗಳೊಂದಿಗೆ ಲೆಕ್ಕ ಪರಿಶೋಧನಾ ಕಛೇರಿಗೆ ಕಳುಹಿಸುವುದಕ್ಕಾಗಿ ಖಜಾನೆಯು ಉಳಿಸಿಕೊಳ್ಳತಕ್ಕುದು. ನಾಲ್ಕನೆ ಪ್ರತಿಯೆಂದು ಗುರುತು ಮಾಡಿದ ನಾಲ್ಕನೇ ಪ್ರತಿಯನ್ನು ಕಾರ್ಯಸಾಧ್ಯವಾದಷ್ಟು ಬೇಗ ಖಜಾನೆ ಅಧಿಕಾರಿಯು ಸಂಬಂಧಪಟ್ಟ ತೆರಿಗೆ ನಿರ್ಧರಣಾ ಪ್ರಾಧಿಕಾರಿಗೆ ಕಳುಹಿಸತಕ್ಕದ್ದು.

**ನಮೂನೆ–1**

**(ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು 1979 ಇದರ 3(ಕ) ಮತ್ತು 4ನೇ ನಿಯಮಗಳನ್ನು ನೋಡಿ)**

**ಸ್ಥಳಾವಕಾಶ ಮತ್ತು ದರದ ಬಗ್ಗೆ ಮೂಲಭೂತ ಮಾಹಿತಿ**

1. ಹೋಟೆಲಿನ ಹೆಸರು ....................................................................................
2. ಹೋಟೆಲಿನ ವಿಳಾಸ ....................................................................................
3. ದೂರವಾಣಿ ಸಂಖ್ಯೆ ....................................................................................
4. ಮಾಲೀಕನ ಹೆಸರು ....................................................................................
5. ವ್ಯವಸ್ಥಾಪಕ ನಿರ್ದೇಶಕ/ವ್ಯವಸ್ಥಾಪಕನ ಹೆಸರು ................................................
6. ಸ್ಥಳಾವಕಾಶದ ವಿವರ ಮತ್ತು ದರ ..................................................................

| ಕೊಠಡಿ | | ಹಾಸಿಗೆಗಳ ಸಂಖ್ಯೆ | ದರ |
|---|---|---|---|
| ಮಾದರಿ ಒಂಟಿ/ಜೋಡಿ | ಸಂಖ್ಯೆ | | |
| | | ಜೋಡಿವಾಸ (ಕ) | ಒಂಟಿವಾಸ ಅನುಭೋಗದಾರರು (ಖ) |

ಸಾಲು ಕೊಠಡಿಗಳು..........................................

ಇತರೆ .....................................

ಒಟ್ಟು ಮೊತ್ತ .....................................

ರುಜು.....................................

ಹೆಸರು .....................................

ದಿನಾಂಕ .....................................

ಪದನಾಮ .....................................

........................... ನಲ್ಲಿ ವಾಸ ಮಾಡುವ ಮೇಲೆ ಹೆಸರಿಸಿದ ........................... ಆದ ನಾನು ಮೇಲೆ ಹೇಳಿದ ವಿವರ ಪಟ್ಟಿಕೆಯಲ್ಲಿರುವ ಅಂಶಗಳು ನನಗೆ ಮಾಹಿತಿ ಇರುವಷ್ಟರ ಮಟ್ಟಿಗೆ ಮತ್ತು ನಾನು ನಂಬುವಷ್ಟರ ಮಟ್ಟಿಗೆ ನಿಜವಾಗಿದೆಯೆಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಹೇಳುತ್ತೇನೆ.

ಸ್ಥಳ ...........................                                        ...........................

ದಿನಾಂಕ ...........................                                        ಮಾಲೀಕನ ಸಹಿ

**ನಮೂನೆ – II**

**(ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು)**

**ನಿಯಮಗಳು, 1979 3(ಖ) ಮತ್ತು 4ನೇ ನಿಯಮಗಳನ್ನು ನೋಡಿ)**

**ಕೊಠಡಿಗಳಲ್ಲಿ ವಾಸ ಮತ್ತು ತೆರಿಗೆ ಸಂಗ್ರಹಣೆಯ ದೈನಂದಿನ ಲೆಕ್ಕ**

**(ವಿಶೇಷ ಸೂಚನೆ: ಪ್ರತಿಯೊಬ್ಬ ವ್ಯಕ್ತಿಗೆ ಸಂಬಂಧಿಸಿದಂತೆ ಪ್ರತ್ಯೇಕ ನಮೂದನ್ನು ಮಾಡತಕ್ಕದ್ದು)**

ಹೋಟೆಲಿನ ಹೆಸರು

| ಕ್ರ. ಸಂ. | ಅತಿಥಿಯ ಹೆಸರು | ವಯಸ್ಸು | ರಾಷ್ಟ್ರೀಯತೆ | ವಾಸ ಮಾಡುತ್ತಿರುವ ಕೊಠಡಿಯ ಹೆಸರು ಅಥವಾ ಸಂಖ್ಯೆ | ಪ್ರತಿ ದಿವಸ ಪ್ರತಿ ಅತಿಥಿಗೆ ವಾಸಕ್ಕಾಗಿನ ಸ್ಥಳಾವಕಾಶಕ್ಕಾಗಿ ಚಾರ್ಜುಗಳ ದರ | ಆಗಮಿಸಿದ ದಿನಾಂಕ, ವೇಳೆ | ನಿರ್ಗಮಿಸಿದ ದಿನಾಂಕ, ವೇಳೆ | ಪ್ರತಿಯೊಬ್ಬ ಅತಿಥಿಯು ಉಳಿದುಕೊಂಡ ಅವಧಿ | ವಾಸಕ್ಕಾಗಿನ ಸ್ಥಳಾವಕಾಶಕ್ಕಾಗಿನ ಚಾರ್ಜುಗಳ ಒಟ್ಟು ಮೊಬಲಗು | ವಿದೇಶಿ ಕರೆನ್ಸಿ ಅಥವಾ ಭಾರತೀಯ ಕರೆನ್ಸಿಯಲ್ಲಿ ಅತಿಥಿಯು ಸಂದಾಯ ಮಾಡಿದ ಚಾರ್ಜುಗಳು | ಹೋಟೆಲಿನಲ್ಲಿ ಕೊಠಡಿ ಅಥವಾ ಸ್ಥಳಾವಕಾಶವನ್ನು ಪಡೆದುಕೊಂಡ ಅತಿಥಿಗಳ ಸಂಖ್ಯೆ | (ಕ) ಬಿಲ್‌ನ ಸಂಖ್ಯೆ ಮತ್ತು ದಿನಾಂಕ | (ಖ) ನಗದು ಮೆಮೊವಿನ ಸಂಖ್ಯೆ ಮತ್ತು ದಿನಾಂಕ | ಸಂಗ್ರಹಿಸಿದ ಭೋಗವಸ್ತು ತೆರಿಗೆಯ ಮೊಬಲಗು | ಷರಾ |
|---|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | | 14 | 15 |
| | | | | | | | | | | | | | | | |
| ದಿನಾಂಕ | | | | | | | | | | | | | | | |

ರುಜು

ಹೆಸರು

ಪದನಾಮ

.............................................ನಲ್ಲಿ ವಾಸವಾಗಿರುವ ಮೇಲೆ ಹೆಸರಿಸಲಾದ ...........................ಆದ ನಾನು, ಮೇಲೆ ಹೇಳಿದ ವಿವರಪಟ್ಟಿಯಲ್ಲಿನ ಒಳಾಂಶಗಳು ನನಗೆ ಮಾಹಿತಿ ಇರುವಷ್ಟರ ಮಟ್ಟಿಗೆ ಮತ್ತು ನಾನು ನಂಬುವಷ್ಟರ ಮಟ್ಟಿಗೆ ನಿಜವಾಗಿದೆ ಎಂದು ಈ ಮೂಲಕ ಶ್ರದ್ಧಾ ಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಹೇಳುತ್ತೇನೆ.

ಸ್ಥಳ ...........................                                        ...........................

ದಿನಾಂಕ ...........................                                        ಮಾಲೀಕನ ರುಜು

## ನಮೂನೆ – III

**ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು)**

**ನಿಯಮಗಳು, 1979 3(ಗ) ಮತ್ತು 4ನೇ ನಿಯಮಗಳನ್ನು ನೋಡಿ**

ಭೋಗ ವಸ್ತು ತೆರಿಗೆ ಸಂಗ್ರಹಣೆ ಮತ್ತು ಇರಸಾಲಿನ ಬಗ್ಗೆ ಮಾಸಿಕ ಸಂಕ್ಷಿಪ್ತಿ.–

ಹೋಟೆಲಿನ ಹೆಸರು ..........................................................................................................................

| ತಿಂಗಳು | ಅತಿಥಿಗಳ ಒಟ್ಟು ಸಂಖ್ಯೆ | ವಾಸಕ್ಕಾಗಿ ವಸೂಲಿ ಒಟ್ಟು ಬಾಡಿಗೆ | ಸಂಗ್ರಹಿಸಿದ ಒಟ್ಟು ಭೋಗ ವಸ್ತು ತೆರಿಗೆ | ಸರ್ಕಾರಕ್ಕೆ ಸಂದಾಯ ಮಾಡಿದ ಭೋಗವಸ್ತು ತೆರಿಗೆ | | | | |
|---|---|---|---|---|---|---|---|---|
| | | | | ಮೊಬಲಗು | ಚಲನ್ನಿನ ದಿನಾಂಕ | ಸಂಖ್ಯೆ | ಶಿಲ್ಕು | ಷರಾ |
| 1 | 2 | 3 | 4 | 5ಕ | 5ಖ | | 5ಗ | 6 |

ದಿನಾಂಕ

ರುಜು

ಹೆಸರು

ಪದನಾಮ

...........................ನಲ್ಲಿ ವಾಸವಾಗಿರುವ ಮೇಲೆ ಹೆಸರಿಸಿದ ...........................ಎಂಬ ನಾನು ಮೇಲೆ ಹೇಳಿದ ವಿವರ ಪಟ್ಟಿಕೆಯಲ್ಲಿನ ಒಳಾಂಶಗಳು ನನಗೆ ಮಾಹಿತಿ ಇರುವಷ್ಟರ ಮಟ್ಟಿಗೆ ಮತ್ತು ನಾನು ನಂಬುವಷ್ಟರ ಮಟ್ಟಿಗೆ ನಿಜವಾಗಿವೆ ಎಂದು ಈ ಮೂಲಕ ಶ್ರದ್ಧಾಪೂರ್ವಕವಾಗಿ ದೃಢೀಕರಿಸುತ್ತೇನೆ ಮತ್ತು ಹೇಳುತ್ತೇನೆ.

ಸ್ಥಳ ........................... ...........................

ದಿನಾಂಕ ........................... ಮಾಲೀಕನ ರುಜು

## ನಮೂನೆ – IV

**(ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು)**
**ಅಧಿನಿಯಮ, 1979ರ 6ನೇ ಪ್ರಕರಣದ ಮೇರೆಗೆ**

**ನೋಟೀಸು**

**(6(1)ನೇ ನಿಯಮವನ್ನು ನೋಡಿ)**

...........................

...........................ಕಛೇರಿ

...........................ಗೆ

ಶ್ರೀ ...........................

ಮಾಲೀಕರು,

ತೆರಿಗೆ ನಿರ್ಧರಣೆಯ ಅವಧಿ ....................................

ಮೇಲೆ ಉಲ್ಲೇಖಿಸಿದ ಅವಧಿಗೆ ಸಂಬಂಧಿಸಿದಂತೆ ಮೇಲ್ಕಂಡ ಅಧಿನಿಯಮದಲ್ಲಿ ಉಲ್ಲೇಖಿಸಿದ 5ನೇ ಪ್ರಕರಣದ ಮೇರೆಗೆ ನೀವು ಒಪ್ಪಿಸಿದ ವಿವರ ಪಟ್ಟಿಕೆಗೆ ಸಂಬಂಧಪಟ್ಟಂತೆ ಕೆಲವು ಅಂಶಗಳಿವೆ, ಅದರಿಂದ ನಾನು ಈ ಕೆಳಕಂಡ ಮತ್ತಷ್ಟು ಮಾಹಿತಿಯನ್ನು ಹಾಜರುಪಡಿಸಲು ಕೋರುತ್ತೇನೆ.

(1) 5ನೇ ನಿಯಮದಲ್ಲಿ ಉಲ್ಲೇಖಿಸಿದ ರಿಜಿಸ್ಟರುಗಳು

(2)

(3)

*ಆದುದರಿಂದ ...........................ವೇಳೆಯಲ್ಲಿ ...........................ದಿನಾಂಕದಂದು ಮೇಲೆ ನಮೂದು ಮಾಡಿದ ದಸ್ತಾವೇಜುಗಳು ಮತ್ತು ನಿನ್ನ ವಿವರ ಪಟ್ಟಿಕೆಯ ಸಮರ್ಥನೆಯಲ್ಲಿ ಯಾವುದೇ ಇತರ ಸಾಕ್ಷ್ಯಗಳೊಂದಿಗೆ ಮೇಲೆ ಹೇಳಿದ ಸದರಿ ವಿಳಾಸದಲ್ಲಿ ನನ್ನ ಕಛೇರಿಗೆ ಅವುಗಳನ್ನು ಹಾಜರುಪಡಿಸಲು/ಹಾಜರಾಗಲು ಅಥವಾ ಹಾಜರುಪಡಿಸುವಂತೆ ಮಾಡಲು ನಿಮ್ಮನ್ನು ಅಗತ್ಯಪಡಿಸಿರುತ್ತೇನೆ ........................... ದಿನಾಂಕದಂದು ........................... ಎಂಬಲ್ಲಿ ........................... ಗಂಟೆಗೆ ಹಾಜರುಪಡಿಸತಕ್ಕದ್ದು.

ಡೆಪ್ಯೂಟಿ ಕಮೀಷನರ್

ಮೊಹರು ...........................

ದಿನಾಂಕ ...........................

**ನಮೂನೆ – V**

**ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು 1979–ಇವುಗಳ 6(4)ನೇ ನಿಯಮದ ಮೇರೆಗೆ ತೆರಿಗೆ ನಿರ್ಧರಣೆಯ**

**ಆದೇಶದ ನಮೂನೆ**

**ಆದೇಶ ಸಂಖ್ಯೆ**

...........................ಅವರ ಕಛೇರಿ

........................... ಎಂದು ಕರೆಯಲಾದ

ಮತ್ತು .............................ನಲ್ಲಿರುವ ............................................ ಹೋಟೆಲಿನ ಮಾಲೀಕನಾದ ಶ್ರೀ .......................... ಹೆಸರಿನ.......................... ಅವರು ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ತೆರಿಗೆ ಅಧಿನಿಯಮ, 1979ರ 3ನೇ ಪ್ರಕರಣದ ಮೇರೆಗೆ ಅವನು ಸಂದಾಯ ಮಾಡಲು ಹೊಣೆಗಾರನಾಗಿರುವಂಥ ಭೋಗ ವಸ್ತುಗಳ ತೆರಿಗೆಗೆ ಸಂಬಂಧಿಸಿದಂತೆ ವಿವರ ಪಟ್ಟಿಕೆಯನ್ನು ಒಪ್ಪಿಸಿರುವುದರಿಂದ / ಒಪ್ಪಿಸಲು ತಪ್ಪಿರುವುದರಿಂದ;

ಮತ್ತು ಆ ವಿವರಪಟ್ಟಿಕೆಯ ಸರಿತನವನ್ನು ಮತ್ತು ಸದರಿ ಮಾಲೀಕನು ವಸೂಲ್ಮಾಡಿದ ಭೋಗ ವಸ್ತುಗಳ ತೆರಿಗೆಯ ಸರಿತನವನ್ನು ನೋಡುವುದಕ್ಕಾಗಿ ಅವನಿಗೆ ಬೈಂಡ್ ಮಾಡಿದ ರಿಜಿಸ್ಟರುಗಳನ್ನು ಮತ್ತು ಇತರ ದಸ್ತಾವೇಜುಗಳನ್ನು ಹಾಜರುಪಡಿಸುವುದಕ್ಕಾಗಿ ನೋಟೀಸನ್ನು ಕೊಡಲಾಗಿರುವುದರಿಂದ ಮತ್ತು ಆ ನೋಟೀಸನ್ನು

ಅವನಿಗೆ ...........................ರಂದು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಆ ದಸ್ತಾವೇಜುಗಳನ್ನು ಹಾಜರುಪಡಿಸುವ ನಿರ್ದೇಶನದೊಂದಿಗೆ ಕ್ರಮಬದ್ಧವಾಗಿ ಜಾರಿ ಮಾಡಿರುವುದರಿಂದ;

ಮತ್ತು ........................... (ಹೆಸರು) ಮಾಲೀಕ* ಅವನ ಏಜೆಂಟನು ಆ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಕಾಲದೊಳಗೆ ಹಿಂದೆ ಹೇಳಿದ ದಸ್ತಾವೇಜುಗಳನ್ನು ಒಪ್ಪಿಸಿರುವುದರಿಂದ, ಹಾಜರುಪಡಿಸಲು ತಪ್ಪಿರುವುದರಿಂದ;

ತೆರಿಗೆ ನಿರ್ಧರಣೆಗಳಿಗಾಗಿ ಕಾರಣಗಳು ಯಾವುವಾದರೂ ಇದ್ದರೆ ಇಲ್ಲಿ ಅವುಗಳನ್ನು ನಿರೂಪಿಸುವುದು;

ಆದ್ದರಿಂದ ಈಗ ...........................ಆದ ನಾನು (ಸದರಿ ಅಧಿನಿಯಮದ ಮೇರೆಗೆ ಡೆಪ್ಯೂಟಿ ಕಮೀಷನರನ ಅಧಿಕಾರಗಳನ್ನು ಚಲಾಯಿಸಲು ಸದರಿ ಅಧಿನಿಯಮದ 2ನೇ ಪ್ರಕರಣದ (3)ನೇ ಖಂಡದ ಮೇರೆಗೆ ನೇಮಕಗೊಂಡ ಅಧಿಕಾರಿಯಾಗಿದ್ದೇನೆ) ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು, 1979 ಇದರ 6ನೇ ನಿಯಮವನ್ನು ಓದಿಕೊಂಡು ಅಧಿನಿಯಮದ 6ನೇ ಪ್ರಕರಣದ ಮೂಲಕ ನನ್ನಲ್ಲಿ ನಿಹಿತವಾದ ಅಧಿಕಾರಗಳನ್ನು ಚಲಾಯಿಸಿ ಆ ವಿವರಪಟ್ಟಿಕೆ ಮತ್ತು ನನ್ನ ಮುಂದೆ* ಹಾಜರುಪಡಿಸಿದ ರಿಜಿಸ್ಟರುಗಳ ಮತ್ತು ಇತರ ದಸ್ತಾವೇಜುಗಳ ಆಧಾರದ ಮೇಲೆ ........................... ಅವಧಿಯಿಂದ ...........................ವರೆಗಿನ ಅವಧಿಗಾಗಿ ...........................ರೂಪಾಯಿ ಭೋಗ ವಸ್ತು ತೆರಿಗೆಯನ್ನು ನಿರ್ಧರಿಸಿ ನನ್ನ ಅತ್ಯುತ್ತಮ ವಿವೇಚನೆಯ ಮೇರೆಗೆ ಈ ತೆರಿಗೆ ನಿರ್ಧರಣೆಯನ್ನು ಈ ಮೂಲಕ ಮಾಡುತ್ತೇನೆ.

ಹಾಗೆ ನಿರ್ಧರಿಸಿದ ಭೋಗವಸ್ತು ತೆರಿಗೆಯ ಮೊಬಲಗನ್ನು ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿವಸಗಳ ಅವಧಿಯೊಳಗೆ ಸರ್ಕಾರಿ ಖಜಾನೆಗೆ ಅಥವಾ ಭಾರತ ರಿಜರ್ವ್ ಬ್ಯಾಂಕ್‌ಗೆ ಸಂದಾಯ ಮಾಡತಕ್ಕದ್ದು.

ಮೊಹರು ...........................     ರುಜು...........................

ದಿನಾಂಕ ...........................     ಹೆಸರು ...........................

ಪದನಾಮ ...........................

*ಅವಶ್ಯವಿಲ್ಲದಿರುವುದನ್ನು ಹೊಡೆದುಹಾಕಿ

...........................ಗೆ

ಶ್ರೀ ...........................

ಮಾಲೀಕ ..................................

## ನಮೂನೆ – VI

**ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮದ 1979ರ 8ನೇ ಪ್ರಕರಣದ ಮೇರೆಗೆ ಹಣ ಸಂದಾಯ ಬಗ್ಗೆ ನೋಟೀಸು**

**(6(5)ನೇ ನಿಯಮವನ್ನು ನೋಡಿ)**

................................ಗೆ

ಶ್ರೀ ................................

................................ಮಾಲೀಕ

................................ ಅವಧಿಗೆ ಸಂಬಂಧಪಟ್ಟಂತೆ

(1)

(2)

(3)

................................ಇವುಗಳ ಬಗ್ಗೆ ನಿಮ್ಮಿಂದ ................................ರೂಪಾಯಿಗಳು ................................ (ಅಕ್ಷರಗಳಲ್ಲಿ) ................................ರೂಪಾಯಿಗಳ ಮೊತ್ತವು ಬರಬೇಕಾಗಿದೆ ಎಂದು ನೋಟೀಸನ್ನು ಕೊಡಲಾಗಿದೆ.

ಆದ್ದರಿಂದ ................................ದಿನಾಂಕದಂದು/ಅಥವಾ ಅದಕ್ಕೆ ಮುಂಚೆ ಮೇಲೆ ಹೇಳಿದ ಸದರಿ ಮೊಬಲಗನ್ನು ಸಂದಾಯ ಮಾಡಲು ನಿಮ್ಮನ್ನು ಅಗತ್ಯಪಡಿಸಲಾಗಿದೆ ಅದಕ್ಕೆ ತಪ್ಪಿದರೆ ಅದನ್ನು 6ನೇ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿ ಉಲ್ಲೇಖಿಸಿದಂತೆ ಭೂ ಕಂದಾಯದ ಬಾಕಿಗಳಂತೆ ಅದನ್ನು ವಸೂಲು ಮಾಡಲಾಗುತ್ತದೆ.

ಡೆಪ್ಯೂಟಿ ಕಮೀಷನರ್

ವಿಳಾಸ

ಮೊಹರು .....................

ದಿನಾಂಕ .......................

ಸ್ಥಳ:..............................

## ನಮೂನೆ – VII

**(ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979ರ 7ನೇ ಪ್ರಕರಣದ ಮೇರೆಗೆ ದಂಡನೆಯನ್ನು ವಿಧಿಸುವ ಆದೇಶದ ನಮೂನೆ**

**(7ನೇ ನಿಯಮವನ್ನು ನೋಡಿ)**

**ದಂಡನೆ ಬಗ್ಗೆ ಆದೇಶ**

............. ಆದೇಶದ ಸಂಖ್ಯೆ

.......................... ಕಛೇರಿ

..........................ದಿನಾಂಕ

.................................. (ಹೋಟೆಲಿನ ಹೆಸರು ಮತ್ತು ವಿಳಾಸ) ಎಂದು ಕರೆಯಲಾಗುವ ಹೋಟೆಲಿನ ಮಾಲೀಕರಾದ ಶ್ರೀ ..................................ರವರು .................. ಅವಧಿಗೆ ಸಂಬಂಧಿಸಿದಂತೆ 7ನೇ ಪ್ರಕರಣದ (ಕ)/(ಖ)/(ಗ)/(ಘ) ಉಪ–ಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸಿರುವುದು ಕಂಡು ಬಂದಿರುವುದರಿಂದ;

ಮತ್ತು ಮೇಲೆ ಹೇಳಿದ ಉಲ್ಲಂಘನೆಗಾಗಿ ಸಾಕಷ್ಟು ಕಾರಣ ಇರಲಿಲ್ಲವೆಂದು ನನಗೆ ಮನದಟ್ಟಾಗಿರುವುದರಿಂದ;

ಆದ್ದರಿಂದ ಈಗ ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ, 1979ರ ಮೇರೆಗೆ ಡೆಪ್ಯೂಟಿ ಕಮೀಷನರರ ಅಧಿಕಾರಗಳನ್ನು ಚಲಾಯಿಸಲು (ಆ ಅಧಿನಿಯಮದ 2ನೇ ಪ್ರಕರಣದ (3)ನೇ ಖಂಡದ ಮೇರೆಗೆ ನೇಮಕಗೊಂಡ ಅಧಿಕಾರಿ) ಡೆಪ್ಯೂಟಿ ಕಮೀಷನರರಾದ ಶ್ರೀ ................................... ನಾನು ಸದರಿ ಅಧಿನಿಯಮದ 7ನೇ ಪ್ರಕರಣದಲ್ಲಿ ಒಳಗೊಂಡ ಅಧಿಕಾರಗಳನ್ನು ಚಲಾಯಿಸಿ ಸದರಿ ಮಾಲೀಕನು ಮೇಲ್ಕಂಡ ಸದರಿ ಅಧಿನಿಯಮದಲ್ಲಿ ಕಾಣಿಸಿದ ಅಗತ್ಯತೆಗಳನ್ನು ಪಾಲಿಸಲು ತಪ್ಪಿರುವುದಕ್ಕಾಗಿ ದಂಡನೆ ರೂಪದಲ್ಲಿ ...................................ರೂ.ಗಳ ................................... (ಅಕ್ಷರಗಳಲ್ಲಿ) ಮೊಬಲಗನ್ನು ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಹತ್ತು ದಿವಸಗಳ ಅವಧಿಯೊಳಗೆ ಸರ್ಕಾರಕ್ಕೆ ಸಂದಾಯ ಮಾಡತಕ್ಕದ್ದೆಂದು ನಿರ್ದೇಶಿಸುತ್ತೇನೆ.

(ಮೊಹರು) .....................

ದಿನಾಂಕ ........................

ರುಜು....................

ಹೆಸರು ....................

ಪದನಾದ ....................

....................ಗೆ ಶ್ರೀ .................... ಮಾಲೀಕರು

**ನಮೂನೆ – VIII**

**ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳ 98ನೇ ನಿಯಮವನ್ನು ನೋಡಿ**

**ಭೋಗವಸ್ತುಗಳ ತೆರಿಗೆ/ದಂಡದ ಮರುಪಾವತಿಗಾಗಿ ಆದೇಶ**

**ಲೆಕ್ಕದ ಶೀರ್ಷಿಕೆ**

**(1) ಮೂಲಪ್ರತಿ**

**(ಹಣ ಪಡೆಯುವವನಿಗಾಗಿ)**

| ಯಾರ ಹೆಸರಿನಲ್ಲಿ ಜಮೆ ಮಾಡಲಾಗಿದೆ | 3ನೇ ಅಂಕಣದಲ್ಲಿರುವ ಮೊಬಲಗು ಯಾವ ಅವಧಿಗೆ ಸಂಬಂಧಪಟ್ಟಿದ್ದು | ವಸೂಲು ಮಾಡಿದ ಭೋಗ ವಸ್ತು ತೆರಿಗೆ/ದಂಡದ ಒಟ್ಟು ಮೊಬಲಗು | ಖಜಾನೆಗೆ ಸಂದಾಯ ಮಾಡಿದ ದಿನಾಂಕ ಮತ್ತು ಚಲನ್ ಸಂಖ್ಯೆ | ಯಾವ ಮೊಬಲಗಿನಲ್ಲಿ ಒಳಗೊಂಡಿದೆ ಮತ್ತು ಯಾವ ಶೀರ್ಷಿಕೆಗೆ ಜಮೆ ಮಾಡಲಾಗಿದೆ | ಖಜಾನೆಗೆ ಜಮೆ ಮಾಡಿದ ಬಗ್ಗೆ ಸರಿನೋಡಿರುವುದಕ್ಕೆ ಸೂಚಕವಾಗಿ ಖಜಾನೆ ಅಧಿಕಾರಿಯ ರುಜು | ಹಣ ಪಡೆದವನ ಹೆಸರು | ಮರುಪಾವತಿ ಮಾಡಬೇಕಾದ ಮೊಬಲಗು | ಷರಾ |
|---|---|---|---|---|---|---|---|---|
| 1 | 2 | 3 | 4 | 5 | **6** | 7 | 8 | 9 |
| | | | | | | | | |

ಈ ಆದೇಶವನ್ನು ಇಲಾಖೆಯ ಲೆಕ್ಕದಲ್ಲಿ ನನ್ನ ಚಿಕ್ಕ ಸಹಿಯ ಅಡಿಯಲ್ಲಿ ನಮೂದು ಮಾಡಲಾಗಿದೆ ಮತ್ತು ಆದೇ ಮೊತ್ತದ ಮರುಪಾವತಿಗಾಗಿ ಹಿಂದಿನ ಆದೇಶವನ್ನು ಮಾಡಲಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

..................... ರೂಪಾಯಿಗಳನ್ನು ..................... ಮಾತ್ರ ಸಂದಾಯ ಮಾಡುವುದಕ್ಕಾಗಿ ಮಂಜೂರು ಮಾಡಲಾಗಿದೆ ಮತ್ತು ಪಾಸು ಮಾಡಲಾಗಿದೆ.

ರುಜು....................

ಹೆಸರು ....................

ಪದನಾದ ....................

| ಪಕ್ಷಕಾರನಿಗಾಗಿ ಸಂದಾಯವನ್ನು ಸ್ವೀಕರಿಸಲಾಗಿದೆ | ಖಜಾನೆಗಾಗಿ ಪರೀಕ್ಷಿಸಲಾಗಿದೆ | ..................... ರೂಪಾಯಿಗಳನ್ನು ಸಂದಾಯ ಮಾಡುವುದು | (ಕ್ಲೇಮುದಾರನ ರುಜು) | ಲೆಕ್ಕಿಗ | ದಿನಾಂಕ (.................... ರೂಪಾಯಿಗಳು ಮಾತ್ರ) |
|---|---|---|---|---|---|
| | | | | | ಖಜಾನೆ ಅಧಿಕಾರಿ:ರಿಜರ್ವ್ ಬ್ಯಾಂಕಿನ ಏಜೆಂಟ್ |

**ಅಡಿ ಟಿಪ್ಪಣಿ.–** ಓರೆ ಅಡ್ಡಗೆರೆ ಷರಾ–ಖಜಾನೆಯಲ್ಲಿ ಸಂದಾಯ ಮಾಡಕೂಡದೆಂಬುದನ್ನು 2ನೇ ಮತ್ತು 3ನೇ ಪ್ರತಿಯ ಮೇಲೆ ಕೆಂಪು ಶಾಯಿಯಲ್ಲಿ ಮುದ್ರಿಸಲಾಗುವುದು.

## ನಮೂನೆ – VIII

**ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳ 8ನೇ ನಿಯಮವನ್ನು ನೋಡಿ**

**ಭೋಗವಸ್ತುಗಳ ತೆರಿಗೆ/ದಂಡದ ಮರುಪಾವತಿಗಾಗಿ ಆದೇಶ**

**(2) ದ್ವಿಪ್ರತಿ**

**(ಹಣ ಪಡೆಯುವವನಿಗಾಗಿ)**

| ಯಾರ ಹೆಸರಿಗೆ ಜಮೆ ಮಾಡಲಾಗಿದೆ | 3ನೇ ಅಂಕಣದಲ್ಲಿರುವ ಮೊಬಲಗು ಯಾವ ಅವಧಿಗೆ ಸೇರಿದುದಾಗಿದೆ | ವಸೂಲು ಮಾಡಿದ ಎಲ್ಲಾ ತೆರಿಗೆ/ದಂಡದ ಒಟ್ಟು ಮೊಬಲಗು | ಖಜಾನೆಗೆ ಹಣ ಸಂದಾಯ ಮಾಡಿದ ದಿನಾಂಕ ಮತ್ತು ಚಲನ್ ಸಂಖ್ಯೆ | ಯಾವ ಮೊಬಲಗಿನಲ್ಲಿ ಎಷ್ಟೊಂದರ ಮತ್ತು ಯಾರ ಲೆಕ್ಕಕ್ಕೆ ಜಮೆ ಮಾಡಲಾಗಿದೆ | ಖಜಾನೆಗೆ ಜಮಾ ಮಾಡಿರುವ ಬಗ್ಗೆ ಸರಿಹೊಂದಿಸಿರುವುದಕ್ಕೆ ಸೂಚಕವಾಗಿ ಖಜಾನೆ ಅಧಿಕಾರಿಯ ರುಜು | ಹಣ ಪಡೆಯುವವನ ಹೆಸರು | ಮರುಪಾವತಿ ಮಾಡಬೇಕಾದ ಮೊಬಲಗು | ಷರಾ |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |

ಈ ಆದೇಶವನ್ನು ಇಲಾಖೆಯ ಲೆಕ್ಕದಲ್ಲಿ ನನ್ನ ಚಿಕ್ಕ ಸಹಿಯ ಅಡಿಯಲ್ಲಿ ನಮೂದು ಮಾಡಲಾಗಿದೆ ಮತ್ತು ಅದೇ ಮೊತ್ತದ ಮರುಪಾವತಿಗಾಗಿ ಹಿಂದಿನ ಆದೇಶವನ್ನು ಮಾಡಲಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

..................... ರೂಪಾಯಿಗಳನ್ನು ..................................... (ಅಕ್ಷರಗಳಲ್ಲಿ) ಮಾತ್ರ ಸಂದಾಯ ಮಾಡುವುದಕ್ಕಾಗಿ ಮಂಜೂರು ಮಾಡಲಾಗಿದೆ ಮತ್ತು ಪಾಸು ಮಾಡಲಾಗಿದೆ.

ರುಜು....................

ಹೆಸರು ....................

ಪದನಾಮ ....................

| | | | |
|---|---|---|---|
| ಪಕ್ಷಕಾರನಿಗಾಗಿ ಸಂದಾಯವನ್ನು ಸ್ವೀಕರಿಸಲಾಗಿದೆ | | ಖಜಾನೆಗಾಗಿ ................. ರೂಪಾಯಿಗಳನ್ನು ಸಂದಾಯ ಮಾಡುವುದು | |
| (ಕ್ಲೇಮುದಾರನ ರುಜು) | ಪರಿಶೀಲಿಸಿದ ಲೆಕ್ಕಿಗ | ದಿನಾಂಕ | (.................... ರೂಪಾಯಿಗಳು ಮಾತ್ರ) ಖಜಾನೆ ಅಧಿಕಾರಿ:ರಿಜರ್ವ್ ಬ್ಯಾಂಕಿನ ಏಜೆಂಟ್ |

**ಅಡಿ ಟಿಪ್ಪಣಿ.–** ಓರೆ ಅಡ್ಡಗೆರೆ ಷರಾ–ಖಜಾನೆಯಲ್ಲಿ ಸಂದಾಯ ಮಾಡಕೂಡದೆಂಬುದನ್ನು 2ನೇ ಮತ್ತು 3ನೇ ಪ್ರತಿಯ ಮೇಲೆ ಕೆಂಪು ಶಾಯಿಯಲ್ಲಿ ಮುದ್ರಿಸಲಾಗುವುದು.

## ನಮೂನೆ – VIII

### ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳ 8ನೇ ನಿಯಮವನ್ನು ನೋಡಿ

### ಭೋಗವಸ್ತುಗಳ ತೆರಿಗೆ/ದಂಡದ ಮರುಪಾವತಿಗಾಗಿ ಆದೇಶ

**ಲೆಕ್ಕದ ಶೀರ್ಷಿಕೆ** **(1) ತ್ರಿಪ್ರತಿ**

**(ಖಜಾನೆಗಾಗಿ)**

| ಯಾರ ಹೆಸರಿನಲ್ಲಿ ಜಮೆ ಮಾಡಲಾಗಿದೆ | 3ನೇ ಅಂಕಣದಲ್ಲಿರುವ ಮೊಬಲಗು ಯಾವ ಅವಧಿಗೆ ಸಂಬಂಧಪಡುತ್ತದೆ | ವಸೂಲು ಮಾಡಿದ ಭೋಗ ವಸ್ತು ತೆರಿಗೆ/ದಂಡನೆಯ ಒಟ್ಟು ಮೊಬಲಗು | ಖಜಾನೆಗೆ ಸಂದಾಯ ಮಾಡಿದ ದಿನಾಂಕ ಮತ್ತು ಚಲನ್ ಸಂಖ್ಯೆ | ಯಾವ ಮೊಬಲಗಿನಲ್ಲಿ ಒಳಗೊಂಡಿದೆ ಮತ್ತು ಯಾವ ಶೀರ್ಷಿಕೆಗೆ ಜಮೆ ಮಾಡಲಾಗಿದೆ | ಖಜಾನೆಗೆ ಜಮೆ ಮಾಡಿದ ಬಗ್ಗೆ ಸರಿನೋಡಿರುವುದಕ್ಕೆ ಸೂಚಕವಾಗಿ ಖಜಾನೆ ಅಧಿಕಾರಿಯ ರುಜು | ಹಣ ಪಡೆದವನ ಹೆಸರು | ಮರು ಪಾವತಿ ಮಾಡಬೇಕಾದ ಮೊಬಲಗು | ಷರಾ |
|---|---|---|---|---|---|---|---|---|
| 1 | 2 | 3 | 4 | 5 | **6** | 7 | 8 | 9 |
| | | | | | | | | |

ಈ ಆದೇಶವನ್ನು ಇಲಾಖೆಯ ಲೆಕ್ಕದಲ್ಲಿ ನನ್ನ ಚಿಕ್ಕ ಸಹಿಯ ಅಡಿಯಲ್ಲಿ ನಮೂದು ಮಾಡಲಾಗಿದೆ ಮತ್ತು ಅದೇ ಮೊತ್ತದ ಮರುಪಾವತಿಗಾಗಿ ಹಿಂದಿನ ಆದೇಶವನ್ನು ಮಾಡಲಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

..................... ರೂಪಾಯಿಗಳನ್ನು ..................... ಮಾತ್ರ ಸಂದಾಯ ಮಾಡುವುದಕ್ಕಾಗಿ ಮಂಜೂರು ಮಾಡಲಾಗಿದೆ ಮತ್ತು ಪಾಸು ಮಾಡಲಾಗಿದೆ.

ಸ್ವೀಕರಿಸಲಾಗಿದೆ | ರುಜು....................
(ಕ್ಲೇಮುದಾರನ ರುಜು) | ಹೆಸರು ....................
ಪದನಾಮ ....................

ಪರೀಕ್ಷಿಸಲಾಗಿದೆ | ಖಜಾನೆಗಾಗಿ ............ ರೂಪಾಯಿಗಳನ್ನು ಸಂದಾಯ ಮಾಡುವುದು

ದಿನಾಂಕ (............ರೂಪಾಯಿಗಳು ಮಾತ್ರ)

ಖಜಾನೆ ಅಧಿಕಾರಿ/ರಿಸರ್ವ್ ಬ್ಯಾಂಕ್ ಏಜೆಂಟ್

---

**ಅಡಿ ಟಿಪ್ಪಣಿ.–** ಓರೆ ಅಡ್ಡಗೆರೆ ಷರಾ–ಖಜಾನೆಯಲ್ಲಿ ಸಂದಾಯ ಮಾಡಕೂಡದೆಂಬುದು 2ನೇ ಮತ್ತು 3ನೇ ಪ್ರತಿಯ ಮೇಲೆ ಕೆಂಪು ಶಾಯಿಯಲ್ಲಿ ಮುದ್ರಿಸಲಾಗುವುದು.

## ನಮೂನೆ – VIII

### ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳ 8ನೇ ನಿಯಮವನ್ನು ನೋಡಿ

### ಭೋಗವಸ್ತುಗಳ ತೆರಿಗೆಯ/ದಂಡದ ಮರುಪಾವತಿಗಾಗಿ ಆದೇಶ

**ಲೆಕ್ಕದ ಶೀರ್ಷಿಕೆ** **ನಾಲ್ಕನೇ ಪ್ರತಿ**

**(2) ದ್ವಿಪ್ರತಿ**
**(ಸಂಬಂಧಪಟ್ಟ ಪ್ರಾಧಿಕಾರಕ್ಕಾಗಿ)**
**(ಖಜಾನೆಗಾಗಿ)**

| 1 | 2 | 3 | 4 | 5 | 6 | 7 | 8 | 9 |
|---|---|---|---|---|---|---|---|---|
| ಯಾರ ಹೆಸರಿನಲ್ಲಿ ಜಮೆ ಮಾಡಲಾಗಿದೆ | 3ನೇ ಅಂಕಣದಲ್ಲಿನ ಮೊಬಲಗು ಯಾರ ಅವಧಿಗೆ ಸಂಬಂಧಪಟ್ಟದ್ದು | ವಸೂಲು ಮಾಡಿದ ಭೋಗ ವಸ್ತು ತೆರಿಗೆ/ದಂಡದ ಒಟ್ಟು ಮೊಬಲಗು | ಖಜಾನೆಗೆ ಸಂದಾಯ ಮಾಡಿದ ದಿನಾಂಕ ಮತ್ತು ಚಲನ್ ಸಂಖ್ಯೆ | ಯಾವ ಮೊಬಲಗಿನಲ್ಲಿ ಒಳಗೊಂಡಿದೆ ಮತ್ತು ಯಾವ ಶೀರ್ಷಿಕೆಗೆ ಜಮೆ ಮಾಡಲಾಗಿದೆ | ಖಜಾನೆಗೆ ಜಮೆ ಮಾಡಿದ ಬಗ್ಗೆ ಸರಿನೋಡಿದ್ದಕ್ಕೆ ಸೂಚಕವಾಗಿ ಖಜಾನೆ ಅಧಿಕಾರಿಯ ರುಜು | ಹಿಂ ಪಡೆದ ಹಣ | ಮರು ಪಾವತಿ ಮಾಡಬೇಕಾದ ಮೊಬಲಗು | ಷರಾ |
| | | | | | | | | |

ಈ ಆದೇಶವನ್ನು ಇಲಾಖೆಯ ಲೆಕ್ಕದಲ್ಲಿ ನನ್ನ ಚಿಕ್ಕ ಸಹಿಯ ಅಡಿಯಲ್ಲಿ ನಮೂದು ಮಾಡಲಾಗಿದೆ ಮತ್ತು ಆದೇ ಮೊತ್ತದ ಮರು ಪಾವತಿಗಾಗಿ ಹಿಂದಿನ ಆದೇಶವನ್ನು ಮಾಡಲಾಗಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

..................... ರೂಪಾಯಿಗಳನ್ನು ..................... ಮಾತ್ರ ಸಂದಾಯ ಮಾಡುವುದಕ್ಕಾಗಿ ಮಂಜೂರು ಮಾಡಲಾಗಿದೆ ಮತ್ತು ಪಾಸು ಮಾಡಲಾಗಿದೆ.

ರುಜು....................

ಹೆಸರು ....................

ಪದನಾಮ ....................

---

ಪಕ್ಷಕಾರನಿಗಾಗಿ

ಸಂದಾಯವನ್ನು ಸ್ವೀಕರಿಸಲಾಗಿದೆ

(ಕ್ಲೇಮುದಾರನ ರುಜು) ಲೆಕ್ಕಿಗ

ಪರೀಕ್ಷಿಸಲಾಗಿದೆ

ದಿನಾಂಕ

ಖಜಾನೆಗಾಗಿ

.................... ರೂಪಾಯಿಗಳನ್ನು

ಸಂದಾಯ ಮಾಡುವುದು

(.................... ರೂಪಾಯಿಗಳು ಮಾತ್ರ)

ಖಜಾನೆ ಅಧಿಕಾರಿ:ರಿಜರ್ವ್ ಬ್ಯಾಂಕಿನ ಏಜೆಂಟ್

---

**ಅಡಿ ಟಿಪ್ಪಣಿ.–** ಓರೆ ಅಡ್ಡಗೆರೆ ಷರಾ–ಖಜಾನೆಯಲ್ಲಿ ಸಂದಾಯ ಮಾಡಕೂಡದೆಂದು 2ನೇ ಮತ್ತು 3ನೇ ಪ್ರತಿಯ ಮೇಲೆ ಕೆಂಪು ಶಾಯಿಯಲ್ಲಿ ಮುದ್ರಿಸಲಾಗುವುದು.

## ನಮೂನೆ – IX

### ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ನಿಯಮಗಳು, 1979 ಇದರ 16ನೇ ನಿಯಮವನ್ನು ನೋಡಿ

ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು) ಅಧಿನಿಯಮ; 1979ರ 3ನೇ ಪ್ರಕರಣದ ಮೇರೆಗೆ ಭೋಗವಸ್ತು ತೆರಿಗೆ ಬಗ್ಗೆ ಚಲನ್ ಲೆಕ್ಕ ಶೀರ್ಷಿಕೆ.

..................... ತಿಂಗಳಿಗಾಗಿ ..................... ಖಜಾನೆ/ಉಪಖಜಾನೆಗೆ ಸಂದಾಯ ಮಾಡಿದ ಭೋಗವಸ್ತು ತೆರಿಗೆ : ದಂಡದ ಬಗ್ಗೆ ಚಲನ್

**ಹೋಟೆಲ್‌ನ ಹೆಸರು** **ಭಾರತದ ರಿಜರ್ವ್ ಬ್ಯಾಂಕ್**

| ......................ಲೆಕ್ಕದ ಬಗ್ಗೆ ಸಂದಾಯ | ಮೊಬಲಗು (ಅಂಕಿಗಳಲ್ಲಿ) (ರೂ.ಪೈ) |
|---|---|

ಕೊಡ ಮಾಡಿದವರು ಯಾರು:–

..................... (ಕ) ವಿವರ ಪಟ್ಟಿಕೆ ಆದೇಶದ ಸಂಖ್ಯೆಗೆ ಸಂಬಂಧಿಸಿದಂತೆ ..................... ಭೋಗ ವಸ್ತು ತೆರಿಗೆ ..................... ವರ್ಷದ ತಿಂಗಳು

................ ತಿಂಗಳು/ಗಳಿಗಾಗಿ (ಖ)...........ದಿನಾಂಕದ ................... ಸಂಖ್ಯೆಯ ಆದೇಶಕ್ಕೆ ಸಂಬಂಧಿಸಿದಂತೆ ದಂಡ

ಭೋಗವಸ್ತು ತೆರಿಗೆಯ ಮೊಬಲಗನ್ನು
ಯಾವ ಮಾಲೀಕನ ಪರವಾಗಿ ಸಂದಾಯ
ಮಾಡಲಾಗಿದೆಯೋ ಆ ಮಾಲೀಕನ
ಹೆಸರು ಮತ್ತು ವಿಳಾಸ

..................................................

ಒಟ್ಟು

...................... ರೂಪಾಯಿಗಳು (ಅಕ್ಷರಗಳಲ್ಲಿ)

ದಿನಾಂಕ ......................

ಸ್ಥಳ ......................

ಮಾಲೀಕನ, ಮಾಲೀಕನ/ಪರವಾಗಿ
ಸಂದಾಯವನ್ನು ಮಾಡುವ ವ್ಯಕ್ತಿಯ ರುಜು
(ಖಜಾನೆಯ ಉಪಯೋಗಕ್ಕಾಗಿ)

(ರೂ.ಗಳು–)

1. ......................ರವರಿಂದ ...................... ರೂಪಾಯಿಗಳ ಸಂದಾಯವನ್ನು ಸ್ವೀಕರಿಸಲಾಗಿದೆ

2. ...................... ನಮೂದಿನ ದಿನಾಂಕ

ಚಲನ್ ಸಂಖ್ಯೆ
ಖಜಾಂಚಿ

ಲೆಕ್ಕಿಗ

ಖಜಾನೆ ಅಧಿಕಾರಿ
ಏಜೆಂಟ್ ಅಥವಾ ವ್ಯವಸ್ಥಾಪಕ

**ಕರ್ನಾಟಕ ಸರ್ಕಾರ**

**ನಮೂನೆ–X**

**(16ನೇ ನಿಯಮವನ್ನು ನೋಡಿ)**

ಕರ್ನಾಟಕ ಭೋಗ ವಸ್ತುಗಳ ಮೇಲೆ ತೆರಿಗೆ (ಹೋಟೆಲುಗಳು ಮತ್ತು ವಸತಿ ಗೃಹಗಳು)
ನಿಯಮಗಳು, 1979 ನಗದಿನಲ್ಲಿ ಹಣ ಸಂದಾಯಕ್ಕಾಗಿ ರಸೀತಿ

ಸ್ಥಳ ......................

ಮೂಲ : ದ್ವಿಪ್ರತಿ

ದಿನಾಂಕ ......................

ರಸೀತಿ ಸಂಖ್ಯೆ

ಕೆಳಗೆ ನಮೂದಿಸಿರುವಂತೆ ......................ರೂಪಾಯಿಗಳ (ಅಕ್ಷರಗಳಲ್ಲಿ) ಮೊತ್ತವನ್ನು ......................ರಿಂದ ಸ್ವೀಕರಿಸಲಾಗಿದೆ.

1. ಆ ಅವಧಿಗಾಗಿ ಭೋಗವಸ್ತು ತೆರಿಗೆ ... ರೂ.ಪೈ.
2. ರಾಜಿ ಹಣ ... ರೂ.ಪೈ.
3. ದಂಡ ...
4. ಸಂಕೀರ್ಣ ...

ಒಟ್ಟು

ಡೆಪ್ಯೂಟಿ ಕಮೀಷನರ್

......................ಗೆ ...................... ರೂಪಾಯಿಗಳನ್ನು (ಅಕ್ಷರಗಳಲ್ಲಿ) ನಾನು ಸಂದಾಯ ಮಾಡಿದ್ದೇನೆ ಮತ್ತು ಆ ಮೊಬಲಗಿಗಾಗಿ ರಸೀದಿಯನ್ನು ಪಡೆದುಕೊಂಡಿದ್ದೇನೆ.

ದಿನಾಂಕ ......................

ಹಣ ಪಡೆಯುವವನ ರುಜು

**ಹಣಕಾಸು ಸಚಿವಾಲಯ**

**ಅಧಿಸೂಚನೆ ಸಂಖ್ಯೆ: ಎಫ್‌ಡಿ 4 ಸಿಎಫ್‌ಎಲ್ 79, ಬೆಂಗಳೂರು, ದಿನಾಂಕ 31ನೇ ಮೇ 1979**

1ನೇ ಪ್ರಕರಣದ (3)ನೇ ಉಪ–ಪ್ರಕರಣದ ಮೂಲಕ ಅಧಿಕಾರಗಳನ್ನು ಚಲಾಯಿಸಿ ಕರ್ನಾಟಕ ಸರ್ಕಾರವು 1979ನೇ ಜೂನ್ ಮೊದಲನೇ ದಿವಸವನ್ನು ಸದರಿ ಅಧಿನಿಯಮವು ಜಾರಿಗೆ ಬರತಕ್ಕಂಥ ದಿನಾಂಕವೆಂದು ಈ ಮೂಲಕ ಗೊತ್ತುಪಡಿಸುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶದ ಮೇಲೆ ಮತ್ತು ಅವರ ಹೆಸರಿನಲ್ಲಿ,

**ಎಲ್.ಎಸ್. ಜಾಗೀರ್‌ದಾರ್,**
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಹಣಕಾಸು ಇಲಾಖೆ (ಸಿಟಿ)